# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಭಾನುವಾರ, ಜೂನ್ 09, 2024

ಸಂಪುಟ : 51 ಸಂಚಿಕೆ : 26 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com










**ಬರಿದಾಗುತ್ತಿದೆ ಟಿವಿ ಸ್ಟೇಷನ್ ಕೆರೆ**

ಮುಂಗಾರು ಮಳೆ ಚುರುಕಾಗಿದೆ. ಇತ್ತ ನಗರದ ಕೆಲವು ವಾರ್ಡುಗಳಿಗೆ ನೀರುಣಿಸುವ ಟಿವಿ ಸ್ಟೇಷನ್ ಕೆರೆ ಬರಿದಾಗಲಾರಂಭಿಸಿದೆ. ಸದ್ಯ ಈ ಭಾಗದಲ್ಲಿ 8 ದಿನಗಳಿಗೊಮ್ಮೆ ನೀರು ನೀಡಲಾಗುತ್ತಿದೆ. ನೀರು ಹರಿಸುವ ಸಮಯವನ್ನೂ ಇಳಿಕೆ ಮಾಡಲಾಗಿದೆ.

# ಮೋದಿ ಸಂಪುಟಕ್ಕೆ ಜೋಷಿ, ಕುಮಾರಸ್ವಾಮಿ?



ಬೆಂಗಳೂರು, ಜೂ. 8 - ನರೇಂದ್ರ ಮೋದಿ ಸಂಪುಟಕ್ಕೆ ಕರ್ನಾಟಕದಿಂದ ಪ್ರಹ್ಲಾದ್ ಜೋಷಿ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸೇರ್ಪಡೆ ಖಚಿತ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕಕ್ಕೆ ಮತ್ತೊಂದು ಸಚಿವ ಸ್ಥಾನ ವೀರಶೈವ/ಲಿಂಗಾಯತ ಸಮುದಾಯಕ್ಕೆ ದೊರೆಯುವ ಸಾಧ್ಯತೆ ಇದೆ. ಈ ಸ್ಥಾನಕ್ಕೆ ರಾಜ್ಯದಿಂದ ಆಯ್ಕೆಗೊಂಡಿರುವ ಸಮುದಾಯದ ಆರು ಮಂದಿಯೂ ಪ್ರಬಲ ಪೈಪೋಟಿ ನಡೆಸಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ರಾಘವೇಂದ್ರ, ಪಿ.ಸಿ.ಗದ್ದಿಗೌಡರ್ ಈ ಸಮುದಾಯದಿಂದ ಕೇಂದ್ರದಲ್ಲಿ ಸ್ಥಾನ ಪಡೆಯಲು ತಮ್ಮದೇ ಆದ ಪ್ರಭಾವದಿಂದ ತೆರೆಮರೆಯಲ್ಲಿ ಕಸರತ್ತು ನಡೆಸಿದ್ದಾರೆ.

ರಾಘವೇಂದ್ರ ಮತ್ತು ಗದ್ದಿಗೌಡರ್ ಅನುಕ್ರಮವಾಗಿ 4 ಮತ್ತು 5ನೇ ಬಾರಿ ಲೋಕಸಭೆ ಪ್ರವೇಶಿಸಿದ್ದಾರೆ. ಉಳಿದ ಮೂವರು ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿ ಸೇವೆ ಸಲ್ಲಿಸಿದ್ದರೂ ಲೋಕಸಭೆಗೆ ಇದೇ ಪ್ರಥಮ ಬಾರಿಗೆ ಆಯ್ಕೆಗೊಂಡಿದ್ದಾರೆ.

ಪುತ್ರ ರಾಘವೇಂದ್ರನಿಗೆ ಮಂತ್ರಿ ಸ್ಥಾನ ಕೊಡಿಸಲು ಯಡಿಯೂರಪ್ಪ ಪಣತೊಟ್ಟಂತಿದೆ, ಈ ಕಾರಣಕ್ಕಾಗಿಯೇ ಅವರು ದೆಹಲಿಗೆ ತೆರಳಿದ್ದಾರೆ. ಲೋಕಸಭೆಗೆ ಸತತವಾಗಿ ನಾಲ್ಕನೇ ಬಾರಿ ಆಯ್ಕೆಗೊಂಡಿರುವ ರಾಘವೇಂದ್ರ ಅವರಿಗೆ ಹಿಂದಿನ ಸರ್ಕಾರದಲ್ಲೂ ಮಂತ್ರಿ ಆಗುವುದು ಕೊನೆ ಗಳಿಗೆಯಲ್ಲಿ ತಪ್ಪಿದೆ. ಈ ಬಾರಿಯಾದರೂ ಅವಕಾಶ ಮಾಡಿಕೊಡಿ ಎಂದು ಯಡಿಯೂರಪ್ಪ ಮನವಿ ಮಾಡಲಿದ್ದಾರೆ ಎನ್ನಲಾಗಿದೆ.

ಚುನಾವಣೆಗೂ ಮುನ್ನ ಬೊಮ್ಮಾಯಿ ಮತ್ತು ಸೋಮಣ್ಣಗೆ ನೀವು ಗೆದ್ದು ಬನ್ನಿ ದೆಹಲಿಯಲ್ಲಿ ನಿಮಗೆ ಒಳ್ಳೆ ಅವಕಾಶ ಸಿಗಲಿದೆ ಎಂದು ಅಮಿತ್ ಷಾ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಕಾಂಗ್ರೆಸ್‌ಗೆ ತೆರಳಿದ ಜಗದೀಶ್ ಶೆಟ್ಟರ್ ಅವರನ್ನು ಹಿಂದಕ್ಕೆ ಕರೆತರುವ ಸಮಯದಲ್ಲಿ ಬಿಜೆಪಿ ವರಿಷ್ಠರು ಸಚಿವ ಸ್ಥಾನದ ಭರವಸೆ ನೀಡಿದ್ದರೆ ಎನ್ನಲಾಗಿದೆ. ಇದನ್ನೇ ಮುಂದಿಟ್ಟುಕೊಂಡು ಇವರೆಲ್ಲರೂ ಪ್ರಯತ್ನ ನಡೆಸಿದ್ದಾರೆ.

ಕರ್ನಾಟಕದಿಂದ ಅತಿ ಹೆಚ್ಚು ಬಾರಿ ಲೋಕಸಭೆಗೆ ಆಯ್ಕೆಗೊಂಡಿರುವ ಪರಿಶಿಷ್ಟ ಜಾತಿಗೆ ಸೇರಿದ ರಮೇಶ್ ಜಿಗಜಿಣಗಿ ಲಾಬಿ ಮಾಡದಿದ್ದರೂ ತಮಗೂ ಅವಕಾಶ ಸಿಗಬಹುದೆಂಬ ಆಶಾಭಾವನೆ ಹೊಂದಿದ್ದಾರೆ.

ವೀರಶೈವ ಸಮುದಾಯದ (2ನೇ ಪುಟಕ್ಕೆ)

# ಮೋದಿ ಪ್ರಮಾಣ ವಚನಕ್ಕೆ ನೆರೆ ದೇಶಗಳ ನಾಯಕರು

ನವದೆಹಲಿ, ಜೂ. 8 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮೂರನೇ ಬಾರಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಹಲವಾರು ನೆರೆಯ ದೇಶಗಳ ನಾಯಕರು ಆಗಮಿಸುತ್ತಿದ್ದಾರೆ.

ಭಾನುವಾರ ಸಂಜೆ ನಡೆಯಲಿರುವ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಶ್ರೀಲಂಕಾ ಅಧ್ಯಕ್ಷ ರಾಣಿಲ್ ವಿಕ್ರಮಸಿಂಘೆ, ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಝ್ಝು, ಬಾಂಗ್ಲಾದೇಶದ ಪ್ರಧಾನ ಮಂತ್ರಿ ಶೇಖ್ ಹಸೀನಾ, ಭೂತಾನದ ಪ್ರಧಾನಿ ಶೆರಿಂಗ್ ಟೊಬ್ಗೆ, ನೇಪಾಳದ ಪ್ರಧಾನಿ ಪುಷ್ಪ ಕಮಾಲ್ ದಹಾಲ್ ಹಾಗೂ ಮಾರಿಷಸ್ ಪ್ರಧಾನ ಮಂತ್ರಿ ಪ್ರವಿಂದ್ ಕುಮಾರ್ ಜಗ್ನೌತ್ ಅವರಿಗೆ ಆಹ್ವಾನ ನೀಡಲಾಗಿದೆ. ಸಿಯಾಚಿಲ್ಲೀಸ್ ಉಪಾಧ್ಯಕ್ಷ ಅಹಮದ್ ಅಫೀಫ್ ಅವರೂ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

# ನೀಟ್ ಅಕ್ರಮ ಆರೋಪ : 1,500 ಅಭ್ಯರ್ಥಿಗಳ ಕೃಪಾಂಕ ಪರಿಶೀಲನೆ

ನವದೆಹಲಿ, ಜೂ. 8 – ವೈದ್ಯಕೀಯ ಪ್ರವೇಶಕ್ಕೆ ನಡೆಸಲಾಗುವ ನೀಟ್ - ಯುಜಿ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ, 1,500 ಅಭ್ಯರ್ಥಿಗಳಿಗೆ ನೀಡಲಾಗಿರುವ ಕೃಪಾಂಕಗಳ ಬಗ್ಗೆ ಪರಿಶೀಲಿಸಲು ನಿರ್ಧರಿಸಲಾಗಿದೆ.

ಇದಕ್ಕಾಗಿ ಶಿಕ್ಷಣ ಸಚಿವಾಲಯವು ನಾಲ್ವರು ಸದಸ್ಯರ ಸಮಿತಿಯನ್ನು ರಚಿಸಿದೆ ಎಂದು ನೀಟ್ ಪರೀಕ್ಷೆ ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್.ಟಿ.ಎ.) ತಿಳಿಸಿದೆ.

ಪರೀಕ್ಷೆಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಎನ್.ಸಿ.ಇ.ಆರ್.ಟಿ. ಪಠ್ಯದಲ್ಲಿ ಮಾಡಿರುವ ಬದಲಾವಣೆ ಹಾಗೂ ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಸಮಯ ನಷ್ಟವಾಗಿರುವುದಕ್ಕೆ ಕೃಪಾಂಕ ನೀಡಿರುವುದರಿಂದ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದಿದ್ದಾರೆ ಎಂದು ಎನ್.ಟಿ.ಎ. ತಿಳಿಸಿದೆ.

ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಕಾಂಗ್ರೆಸ್, ಆಮ್ ಆದ್ಮಿ ಪಾರ್ಟಿ, ಡಿ.ಎಂ.ಕೆ. ಸೇರಿದಂತೆ ಹಲವು ಪಕ್ಷಗಳು ಆರೋಪಿಸಿವೆ. ಪರೀಕ್ಷಾ ಅವ್ಯವಹಾರಗಳ ಕುರಿತು ಸಿ.ಬಿ.ಐ. ತನಿಖೆ ನಡೆಸಬೇಕು ಎಂದು ಆರ್.ಎಸ್.ಎಸ್.ನ ವಿದ್ಯಾರ್ಥಿ ವಿಭಾಗವಾದ ಎ.ಬಿ.ವಿ.ಪಿ. ಆಗ್ರಹಿಸಿದೆ.

ರಾಜಸ್ಥಾನದ ಕೋಟಾದಲ್ಲಿ ದೊಡ್ಡ ಸಂಖ್ಯೆಯ ನೀಟ್ ಆಕಾಂಕ್ಷಿಗಳು (2ನೇ ಪುಟಕ್ಕೆ)

# ರಾಹುಲ್ ವಿಪಕ್ಷ ನಾಯಕರಾಗಲಿ

## ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ಆಗ್ರಹ

**ಕಾಂಗ್ರೆಸ್ ಸಾಧನೆಯ ಶ್ರೇಯ ಜೋಡೋ ಯಾತ್ರೆಗೆ ಸಲ್ಲಿಕೆ**

ನವದೆಹಲಿ, ಜೂ. 8 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಬೇಕು ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ಸರ್ವಸಮ್ಮತಿಯಿಂದ ಆಗ್ರಹಿಸಿದ್ದಾರೆ.

ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸಾಧನೆಗೆ ರಾಹುಲ್ ಗಾಂಧಿ ನಡೆಸಿದ ಎರಡು ಭಾರತ್ ಜೋಡೋ ಯಾತ್ರೆಗಳು ಕಾರಣ ಎಂದು ಸಭೆಯಲ್ಲಿ ತಿಳಿಸಲಾಯಿತು ಎಂದರು.

ಪ್ರತಿಪಕ್ಷದ ನಾಯಕ ಸ್ಥಾನ ವಹಿಸಿಕೊಳ್ಳುವ ಬಗ್ಗೆ ರಾಹುಲ್ ಗಾಂಧಿ ಶೀಘ್ರದಲ್ಲೇ ನಿರ್ಧರಿಸಲಿದ್ದಾರೆ ಎಂದು ವೇಣುಗೋಪಾಲ್ ಹೇಳಿದರು.

2014ರ ನಂತರ ಮೊದಲ ಬಾರಿಗೆ ಕಾಂಗ್ರೆಸ್ ಪಕ್ಷಕ್ಕೆ ವಿಪಕ್ಷ ನಾಯಕ ಸ್ಥಾನದ ಅವಕಾಶ ದೊರೆತಿದೆ. ಕಳೆದ ಹತ್ತು ವರ್ಷಗಳಲ್ಲಿ ಕಾಂಗ್ರೆಸ್ (2ನೇ ಪುಟಕ್ಕೆ)

# 'ಪ್ರಚಂಡ ಕುಳ್ಳ' ಕನಸುಗಾರ, ಛಲಗಾರ

## ಹಿರಿಯ ನಟ 'ದ್ವಾರಕೀಶ್ ನುಡಿ ನಮನ'ದಲ್ಲಿ ನಿರ್ದೇಶಕ ಹೆಚ್.ಆರ್. ಭಾರ್ಗವ



ದಾವಣಗೆರೆ, ಜೂ.8 - ಕನ್ನಡ ಚಿತ್ರರಂಗದಲ್ಲಿ ದ್ವಾರಕೀಶ್ ಸಹ ಕನಸುಗಾರ, ಕಂಡ ಕನಸುಗಳನ್ನು ಈಡೇರಿಸುವ ಛಲಗಾರ ಎಂದು ಸಿನಿಮಾ ನಿರ್ದೇಶಕ, ನಿರ್ಮಾಪಕ ಹೆಚ್.ಆರ್. ಭಾರ್ಗವ ಹೇಳಿದರು.

ಸಿನಿಮಾ ಸಿರಿ ಸಂಸ್ಥೆಯಿಂದ ನಗರದ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಶನಿವಾರ ಸಂಜೆ 'ಕಾಲವನ್ನು ತಡೆಯೋರು ಯಾರು ಇಲ್ಲ' ಶೀರ್ಷಿಕೆಯಡಿ ಹಮ್ಮಿಕೊಳ್ಳಲಾಗಿದ್ದ ದ್ವಾರಕೀಶ್‌ರವರ ನುಡಿ ನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚಿತ್ರರಂಗದಲ್ಲಿ ವಿಭಿನ್ನ ಕನಸುಗಳನ್ನು ಕಾಣುತ್ತಿದ್ದ ದ್ವಾರಕೀಶ್, 'ಸಿಂಗಾಪುರದಲ್ಲಿ ರಾಜ ಕುಳ್ಳ' ಚಿತ್ರವನ್ನು ಹೊರ ದೇಶದಲ್ಲಿ ಚಿತ್ರೀಕರಣ ಮಾಡಿದ್ದರು. ಅಂದೇ ಮೂರು ಭಾಷೆಗಳಲ್ಲಿ 'ಆಫ್ರಿಕಾದಲ್ಲಿ ಶೀಲಾ' ಚಿತ್ರ ಮಾಡಿದರು. ಕಿಶೋರ್ (2ನೇ ಪುಟಕ್ಕೆ)

# ಸಿರಿಗೆರೆ : ಸದ್ಧರ್ಮ ನ್ಯಾಯಪೀಠಕ್ಕೆ ಬಿಡುವು



ಸಿರಿಗೆರೆ,ಜೂ. 8- ಇಲ್ಲಿನ ತರಳಬಾಳು ಬೃಹನ್ಮಠದಲ್ಲಿ ನಾಡಿದ್ದು ದಿನಾಂಕ 10ರ ಸೋಮವಾರ ನಡೆಯಬೇಕಿದ್ದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳನ್ನು ಮುಂದೂಡಲಾಗಿದೆ.

ಮುಂಬೈನಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಜಗದ್ಗುರು ಡಾ|| ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಪ್ರವಾಸ ಕೈಗೊಂಡಿರುವ ಕಾರಣ, ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ನ್ಯಾಯಪೀಠದ ಕಾರ್ಯದರ್ಶಿಗಳು ತಿಳಿಸಿದ್ದಾರೆ.


**District 17 ಹೋಟೆಲ್ ಬಾಡಿಗೆಗಿದೆ**

ದಾವಣಗೆರೆ ನಗರದ ಬೈಪಾಸ್ ರಸ್ತೆಯಲ್ಲಿರುವ District -17 ಹೋಟೆಲ್ ಅನ್ನು ರೆಸ್ಟೋರೆಂಟ್, ಜಿಮ್, ಸ್ಕೂಲ್, ಹಾಸ್ಟೆಲ್, ಟೈಲ್ಸ್/ಪ್ಲೈವುಡ್ ಶಾಪ್‌ಗೆ, ಆಫೀಸ್‌ಗೆ ಬಾಡಿಗೆಗೆ ಕೊಡಲಾಗುವುದು.


97319 99918

**ಬೇಕಾಗಿದ್ದಾರೆ**

ಶಾಂತಿ ಸಾಗರ ಮೀನು ಮರಿ ಪಾಲನಾ ಕೇಂದ್ರದಲ್ಲಿ (ಸೂಳೆಕೆರೆ). ಆಲಂಕಾರಿಕ ಮೀನು ಮರಿಗಳನ್ನು ಮಾರಾಟ ಮಾಡಲು ಆಸಕ್ತಿ ಉಳ್ಳವರು ಬೇಕಾಗಿದ್ದಾರೆ ಹಾಗೂ ಮತ್ಸ್ಯದರ್ಶಿನಿ (ಮೀನಿನ ಹೋಟೆಲ್) ನಡೆಸಲು ಅನುಭವ ಆಸಕ್ತಿ ಇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ.

9448186238/8892324268


# ಮಾಧ್ಯಮ ವಲಯದ ದಿಗ್ಗಜ ರಾಮೋಜಿ ರಾವ್ ಇನ್ನಿಲ್ಲ



ಹೈದರಾಬಾದ್, ಜೂ. 8 - ಸುದ್ದಿ ಹಾಗೂ ಮನರಂಜನಾ ಉದ್ಯಮದಲ್ಲಿ ಹೊಸ ಅಲೆ ತಂದಿದ್ದ ರಾಮೋಜಿ ಸಮೂಹದ ಅಧ್ಯಕ್ಷ ರಾಮೋಜಿ ರಾವ್ ನಿಧನರಾಗಿದ್ದಾರೆ. ಅವರಿಗೆ 88 ವರ್ಷ ವಯಸ್ಸಾಗಿತ್ತು.

ಉಸಿರಾಟದ ಸಮಸ್ಯೆಯಿಂದಾಗಿ ಜೂನ್ 5ರಂದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಬೆಳಿಗ್ಗೆ 4.50ಕ್ಕೆ ಕೊನೆಯುಸಿರೆಳೆದಿದ್ದಾರೆ.

ಈಟಿವಿ ಪತ್ರಿಕೆ ಹಾಗೂ ಈಟಿವಿ ವಾಹಿನಿಗಳ ಮೂಲಕ ರಾಮೋಜಿ ರಾವ್ ಅವಿಭಜಿತ ಆಂಧ್ರ ಪ್ರದೇಶದ ಮಾಧ್ಯಮ (2ನೇ ಪುಟಕ್ಕೆ)

# ಮಣಿಪುರದಲ್ಲಿ ಪೊಲೀಸ್ ಠಾಣೆಗಳು, ಮನೆಗಳಿಗೆ ಬೆಂಕಿ

ಇಂಫಾಲ್, ಜೂ. 8 – ಮಣಿಪುರದ ಜಿರಿಬಮ್ ಜಿಲ್ಲೆಯಲ್ಲಿ ಶಂಕಿತ ಉಗ್ರರು ಎರಡು ಪೊಲೀಸ್ ಔಟ್‌ಪೋಸ್ಟ್, ಅರಣ್ಯ ಇಲಾಖೆ ಕಚೇರಿ ಹಾಗೂ 70 ಮನೆಗಳನ್ನು ಸುಟ್ಟು ಹಾಕಿದ್ದಾರೆ. ನಂತರ ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾಯಿಸಲಾಗಿದೆ. ಉಗ್ರರ ವಿರುದ್ಧ ಕಾರ್ಯಾಚರಣೆ ನಡೆಸಲು ಪೊಲೀಸ್ ಕಮಾಂಡೋಗಳ ತಂಡವನ್ನು ಸ್ಥಳಕ್ಕೆ ರವಾನಿಸಲಾಗಿದೆ. ಜಿರಿಬಮ್ ಪ್ರದೇಶದಿಂದ 239 ಮೀಟಿ ಸಮುದಾಯದವರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲಾಗಿದೆ.





Narayana Health

Take Care

**SS Narayana Superspeciality Centre, Davanagere**

**we're hiring!**

| Department | Designation | Qualification | Sub Department | Experience |
|---|---|---|---|---|
| Cardiology | Cardiac Anesthesiology | MD,PGDCC DM Cardiac Anaesthesia | Cardiac OT | 1+ Years |
| Duty Doctors | Senior House Officer | MBBS | ICU/Ward | 0 to 2 Years |
| Neurology | Staff Nurse | GNM/B.Sc | ICU/Ward | 2+ Years |
| Neuro Surgery | Staff Nurse | GNM/B.Sc | ICU/Ward | 2+ Years |
| Neuro Surgery | Shift In charge | GNM/B.Sc | ICU/Ward | 5+ Years |
| Nephrology | Staff Nurse | GNM/B.Sc | Dialysis Ward | 2+ Years |
| Cardiology | Staff Nurse | GNM/B.Sc | Cath Lab/ICU/Ward | 2+ Years |
| Neurology | Technician | BSc in Neuroscience | Neuro OPD | 0 to 4 Years |
| Administration | Deputy Medical Superintendent | BAMS,MHA or MBBS,MHA | Medical Administration | 4+ Years |
| Administration | Executive Sr. Executive | Any Degree | Claims/TPA | 2+ Years |
| Administration | Deputy Manager | MBA in Marketing | Marketing in Health Care | 5+ Years |

Our Network: Hospitals I Health City I Clinics I Labs I Pharma I One Health

Kindly share your resume to deepa.patil@narayanahealth.org or contact Deepa Patil on +91 95387 69341/63623 12151 in between 10 AM to 6 PM

Candidates can directly walk in to SS Narayana Super Speciality Centre, Davanagere

# ಹರಿಹರದಲ್ಲಿ ಇಂದು ಅಂಬೇಡ್ಕರ್ ಜಯಂತಿ, ಪ್ರೊ.ಬಿ.ಕೃಷ್ಣಪ್ಪ ಜನ್ಮ ದಿನಾಚರಣೆ




ಹರಿಹರ, ಜೂ.8- ನಗರದ ಹೊರವಲಯದ ಬೈಪಾಸ್ ಹತ್ತಿರದ ಪ್ರೊ ಬಿ. ಕೃಷ್ಣಪ್ಪನವರ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ರಾಜ್ಯ ಘಟಕ ಮತ್ತು ಹರಿಹರ ತಾಲ್ಲೂಕು ಘಟಕದ ಸಹಯೋಗದೊಂದಿಗೆ ನಾಳೆ ದಿನಾಂಕ 9 ರ ಭಾನುವಾರ ಬೆಳಗ್ಗೆ 10 ಗಂಟೆಗೆ ಡಾ ಬಿ.ಆರ್. ಅಂಬೇಡ್ಕರ್ ರವರ 133 ನೇ ಜನ್ಮದಿನ, ಪ್ರೊ ಬಿ. ಕೃಷ್ಣಪ್ಪ ನವರ 86 ನೇ ಜನ್ಮದಿನ ಹಾಗೂ ದಲಿತ ಸಂಘರ್ಷ ಸಮಿತಿ ರಾಜ್ಯ ಪದಾಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿದೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್ ಹೇಳಿದರು.

ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಶಿವಮೊಗ್ಗ ವಹಿಸಲಿದ್ದಾರೆ. ಮೈಸೂರು ಹಿರಿಯ ಸಾಹಿತಿಗಳು ಮತ್ತು ಪ್ರಗತಿಪರ ಚಿಂತಕ ಪ್ರೊ. ಕೆ.ಎಸ್. ಭಗವಾನ್ ಉದ್ಘಾಟನೆ ಮಾಡಲಿದ್ದಾರೆ ಎಂದರು.

ಫಾ.ಕೆ.ಎಂ. ಜಾರ್ಜ್ ಸಾನಿಧ್ಯ ವಹಿಸಲಿದ್ದಾರೆ. ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ರಾಯಚೂರಿನ ಹನುಮಂತಪ್ಪ ಕಾಗಲ್‌ಕರ್ ಪ್ರಾಸ್ತಾವಿಕ ನುಡಿ ನುಡಿಯಲಿದ್ದಾರೆ.

ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಘಟನಾ ಸಂಚಾಲಕರಾದ ಬಳ್ಳಾರಿ ನಾಗರಾಜ್ ಮುಂಡರಗಿ, ಕಾರವಾರ ಎಸ್ ಪಕ್ಕಿರಪ್ಪ ಮುಂಡಗೋಡ, ಚಿಕ್ಕಬಳ್ಳಾಪುರ ಟಿ. ಎನ್. ಗಂಗಾಧರಪ್ಪ, ಮಂಡ್ಯ ವೆಂಕಟೇಶ ನಾಗಮಂಗಲ, ಬೆಂಗಳೂರು ಬಸವರಾಜ್ ನಾಗಮಗಲ, ಬೆಳಗಾವಿ ರಮೇಶ್ ಎಸ್ ಮಾದರ್, ರಾಜ್ಯ ಖಜಾಂಚಿ ಶಿವಮೊಗ್ಗ ಜಿ.ಎ ಕಾಟ್ಕೆ, ರಾಜ್ಯ ಮಹಿಳಾ ಘಟಕದ ಸಂಚಾಲಕಿ ಚಿಕ್ಕಬಳ್ಳಾಪುರ ರತ್ನಮ್ಮ, ಹರಿಹರ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂತೇಶ್ ಸೇರಿದಂತೆ ಇತರೆ ಪ್ರಮುಖ ದಲಿತ ಸಂಘರ್ಷ ಸಮಿತಿಯ ಮುಖಂಡರು ಭಾಗವಹಿಸಲಿದ್ದಾರೆ.


ಈ ಸಂದರ್ಭದಲ್ಲಿ ಹರಿಹರ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ಪಿ.ಜೆ. ಮಹಾಂತೇಶ್, ಐರಣಿ ಹನುಮಂತಪ್ಪ, ಮಂಜುನಾಥ್ ಎತ್ತಿನಹಳ್ಳಿ, ತಿಪ್ಪಣ್ಣ ಕಡಲೆಗುಂದಿ, ತಿಪ್ಪೇಶ್ ಎತ್ತಿನಹಳ್ಳಿ, ಚೌಡಪ್ಪ ಭಾನುವಳ್ಳಿ, ನಾಗರಾಜ್ ಚಿತ್ತಾನಹಳ್ಳಿ ಇತರರು ಹಾಜರಿದ್ದರು.




## ಮಳೆ : ಛತ್ರಿ, ಜರ್ಕಿನ್, ರೈನ್‌ಕೋಟ್ ಮೊರೆ ಹೋದ ಜನತೆ

ಹರಿಹರ, ಜೂ.8- ನಗರದಲ್ಲಿಂದು ಬೆಳಗ್ಗೆಯಿಂದ ಸಂಜೆಯವರೆಗೆ ಧಾರಾಕಾರವಾಗಿ ಸುರಿದ ಮುಂಗಾರು ಮಳೆಯಿಂದಾಗಿ ಹಲವಾರು ತಿಂಗಳಗಳಿಂದ ಮನೆಯಲ್ಲಿ ಗೂಡು ಸೇರಿದ್ದ, ಛತ್ರಿ, ಜರ್ಕಿನ್, ರೈನ್ ಕೋಟ್ ಗಳು ಹೊರಗಡೆ ಬರುವಂತಾಗಿದೆ. ಮುಂಗಾರು ಮಳೆಯ ಅರ್ಭಟದಿಂದ ಶಾಲಾ, ಕಾಲೇಜುಗಳಿಗೆ ಹೋಗಿ ಬರುವ ವಿದ್ಯಾರ್ಥಿಗಳಿಗೆ, ಅಗತ್ಯವಾದ ಕೆಲಸ ಕಾರ್ಯಗಳಿಗೆ ಓಡಾಡುವಂತವರಿಗೆ ಮತ್ತು ವ್ಯಾಪಾರಸ್ಥರಿಗೆ ಸಾಕಷ್ಟು ತೊಂದರೆ ಆಗಿರುವುದು ಕಂಡುಬಂದಿತು.

# ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ : ಆರೋಪಗಳಲ್ಲಿ ಹುರುಳಿಲ್ಲ ತನಿಖೆಗೆ ಸಿದ್ಧ : ಸಚಿವ



ಬೆಂಗಳೂರು, ಜೂ. 8 - ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಅಕ್ರಮ ಹಣ ವರ್ಗಾವಣೆ ಸಾಕ್ಷ್ಯಗಳ ನಾಶಕ್ಕೆ ನನ್ನ ಕಚೇರಿಯಲ್ಲಿ ಯಾರೊಂದಿಗಾದರೂ ಸಭೆ ನಡೆಸಿದ್ದರೆ ಮುಕ್ತ ಮತ್ತು ನ್ಯಾಯಸಮ್ಮತ ತನಿಖೆಗೆ ಸಿದ್ಧ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಸವಾಲು ಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಕರಣ ಕುರಿತ ಆರೋಪಗಳ ಬಗ್ಗೆ ಸ್ಪಷ್ಟನೆ ನೀಡಿ, ಮೇ 24ರಂದು ಬೆಂಗಳೂರಿನ ವಿಕಾಸಸೌಧದ ನನ್ನ ಕಚೇರಿಯಲ್ಲಿ ನಾನು, ವಾಲ್ಮೀಕಿ ಅಭಿವೃದ್ಧಿ ನಿಗಮ ಮಂಡಳಿಯ ಅಧ್ಯಕ್ಷ ಬಸವರಾಜ್ ದದ್ದಲ್ ಸೇರಿದಂತೆ ಕೆಲವರು ಸಭೆ ನಡೆಸಿ ಸಾಕ್ಷ್ಯ ನಾಶ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ನಿಜ ಸಂಗತಿಯೆಂದರೆ, ಮೇ 24ರಂದು ಲೋಕಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದದ್ದರಿಂದ ಕಚೇರಿಗೆ ಭೇಟಿ ನೀಡಿರಲಿಲ್ಲ ಎಂದರು. ಅಂದು ನಾನು ಕಚೇರಿಯಲ್ಲಿ ಇದ್ದೆ ಎಂದರೆ, ಇದಕ್ಕಿಂತ ಅಪಹಾಸ್ಯ ಇನ್ನೊಂದಿಲ್ಲ. ತಮ್ಮ ಮೇಲಿನ ಆರೋಪಗಳಲ್ಲಿ ಹುರುಳಿಲ್ಲ, ಯಾವುದೇ ತನಿಖೆ ನಡೆಸಿದರೂ ಕಾನೂನುಬದ್ಧವಾಗಿ ಎದುರಿಸಲು ಸಿದ್ಧ. ಪ್ರಾಮಾಣಿಕವಾಗಿ ಕೆಲಸ ಮಾಡಿದ ತೃಪ್ತಿ ಇದೆ, ಸುಳ್ಳು ಆರೋಪಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದಿದ್ದಾರೆ.

ಸಚಿವನಾಗಿರುವುದರಿಂದ ರಾಜ್ಯದ ನಾನಾ ಭಾಗಗಳಿಂದ ನೂರಾರು ಜನ ಬಂದು ಹೋಗುತ್ತಾರೆ, ಬಂದುಹೋಗುವವರ ಪೂರ್ಣ ವಿವರಗಳನ್ನು ಕಲೆ ಹಾಕಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ನನ್ನ ಕಚೇರಿಯಲ್ಲಿ ಸಭೆ ನಡೆಸಿದ್ದರೆ ಸಿಸಿಟಿವಿ ಫುಟೇಜ್ ಪರಿಶೀಲಿಸಲಿ, ಈ ಕುರಿತು ಸರ್ಕಾರ ತನಿಖೆ ನಡೆಸಿದರೂ ನನ್ನ ಅಭ್ಯಂತರವಿಲ್ಲ. ತನಿಖೆಯಿಂದ ಸತ್ಯಾಸತ್ಯತೆ ಹೊರಬರಲಿದೆ, ತಪ್ಪು ಯಾರೇ ಮಾಡಿದರೂ ಕಾನೂನು ಪ್ರಕಾರ ಶಿಕ್ಷೆಯಾಗುತ್ತದೆ ಎಂದವರು ಹೇಳಿದರು.

ಪ್ರತಿ ಪಕ್ಷ ಬಿಜೆಪಿಯವರು ಯಾವ ಆಧಾರದ ಮೇಲೆ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ ಎಂಬುದೇ ತಿಳಿಯುತ್ತಿಲ್ಲ.

ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ ಎಂದ ಮೇಲೆ ರಾಜೀನಾಮೆ ನೀಡುವ ಔಚಿತ್ಯವಾದರೂ ಏನು? ಎಂದು ಶರಣ ಪ್ರಕಾಶ್ ಪಾಟೀಲ್ ಪ್ರಶ್ನಿಸಿದರು.

## ಅಭ್ಯರ್ಥಿಗಳ ಕೃಪಾಂಕ ಪರಿಶೀಲನೆ

**(1ನೇ ಪುಟದಿಂದ)** ಹಾಗೂ ಅವರ ಪೋಷಕರು ಆಲನ್ ಕೆರಿಯರ್ ಇನ್‌ಸ್ಟಿಟ್ಯೂಟ್ ನಿರ್ದೇಶಕ ಬ್ರಿಜೇಶ್ ಮಹೇಶ್ವರಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಆರು ಪರೀಕ್ಷಾ ಕೇಂದ್ರಗಳಲ್ಲಿ ಸಮಯ ನಷ್ಟವಾಗಿದ್ದರ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲಾಗಿದೆ. ಇದರಿಂದಾಗಿ ಗರಿಷ್ಠ ಅಂಕ ಪಡೆದವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಮೇಘಾಲಯ, ಹರಿಯಾಣದ ಬಹದ್ದೂರ್‌ಘರ್, ಛತ್ತೀಸ್‌ಘಡದ ದಂತೇವಾಡ ಹಾಗೂ ಬಲೋಧ್, ಗುಜರಾತ್‌ನ ಸೂರತ್ ಹಾಗೂ ಚಂಡೀಘಡ ಕೇಂದ್ರಗಳ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲಾಗಿದೆ.

ಈ ಬಾರಿ 67 ವಿದ್ಯಾರ್ಥಿಗಳು ಮೊದಲ ಸ್ಥಾನ ಪಡೆದಿದ್ದಾರೆ. ಇವರಲ್ಲಿ ಎಂಟು ಅಭ್ಯರ್ಥಿಗಳು ಹರಿಯಾಣದ ಒಂದೇ ಕೇಂದ್ರಕ್ಕೆ ಸೇರಿದವರು.

ಈ ಬಗ್ಗೆ ಹೇಳಿಕೆ ನೀಡಿರುವ ಎನ್.ಟಿ.ಎ. ಪ್ರಧಾನ ನಿರ್ದೇಶಕ ಸುಬೋಧ್ ಕುಮಾರ್ ಸಿಂಗ್, 1,500ಕ್ಕೂ ಹೆಚ್ಚು ಅಭ್ಯರ್ಥಿಗಳ ಫಲಿತಾಂಶ ಪರಿಶೀಲನೆಗಾಗಿ ಉನ್ನತ ಹಂತದ ಸಮಿತಿ ರಚಿಸಲಾಗಿದೆ. ಯು.ಪಿ.ಎಸ್.ಇ. ಮಾಜಿ ಅಧ್ಯಕ್ಷರೊಬ್ಬರು ನಾಲ್ಕು ಸದಸ್ಯರ ಸಮಿತಿಗೆ ಅಧ್ಯಕ್ಷರಾಗಿರಲಿದ್ದಾರೆ. ಸಮಿತಿ ವಾರದಲ್ಲೇ ವರದಿ ನೀಡಲಿದೆ ಎಂದಿದ್ದಾರೆ.

ವರದಿ ನಂತರ ಅಂಕಗಳ ಪರಿಷ್ಕರಣೆಯಾಗಬಹುದಾಗಿದೆ. ಕೃಪಾಂಕ ನೀಡಿರುವುದರಿಂದ ಅಂಕಗಳ ಅರ್ಹತಾ ಮಾನದಂಡದ ಮೇಲೆ ಪರಿಣಾಮವಾಗಿಲ್ಲ. ಅಂಕಗಳ ಪರಿಷ್ಕರಣೆಯಿಂದ ಪ್ರವೇಶದ ಮೇಲೆ ಪರಿಣಾಮವಾಗುವುದಿಲ್ಲ ಎಂದವರು ಹೇಳಿದ್ದಾರೆ.

## ದಿಗ್ಗಜ ರಾಮೋಜಿ ರಾವ್ ಇನ್ನಿಲ್ಲ

**(1ನೇ ಪುಟದಿಂದ)** ವಲಯದಲ್ಲಿ ಹೊಸ ಅಲೆಗೆ ಕಾರಣವಾಗಿದ್ದರು. ಅವರು ಪದ್ಮ ವಿಭೂಷಣ ಪ್ರಶಸ್ತಿಗೂ ಪಾತ್ರರಾಗಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವಾರು ಗಣ್ಯರು ರಾಮೋಜಿ ರಾವ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ. ಸರ್ಕಾರಿ ಗೌರವಗಳೊಂದಿಗೆ ರಾಮೋಜಿ ರಾವ್ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ತೆಲಂಗಾಣದ ಮುಖ್ಯಮಂತ್ರಿ ರೇವಂತ್ ರೆಡ್ಡಿ ತಿಳಿಸಿದ್ದಾರೆ.

## ಸುರೇಶ್ ಸೋಲಿಗೆ ಸಿದ್ದರಾಮಯ್ಯ ಕಾರಣ : ಶಾಸಕ ಸುರೇಶ್ ಗೌಡ

ಬೆಂಗಳೂರು, ಜೂ. 8 - ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಸೋಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಣ ಎಂದು ಬಿಜೆಪಿ ಶಾಸಕ ಬಿ. ಸುರೇಶ್ ಗೌಡ ಬಾಂಬ್ ಸಿಡಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದೊರಕುವ ಮುಖ್ಯಮಂತ್ರಿ ಹುದ್ದೆ ತಪ್ಪಿಸಲು ಸಿದ್ದರಾಮಯ್ಯ ಹಿಂದಿರುವ ಅಹಿಂದ ಒಕ್ಕೂಟ ತಮಗೆ ಬೇಡವಾದವರನ್ನು ಚುನಾವಣೆಯಲ್ಲಿ ಸೋಲಿಸಲು ಪ್ರಮುಖ ಪಾತ್ರ ವಹಿಸಿತ್ತೆಂದು ದೂರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಇರಬೇಕೆಂಬ ಏಕೈಕ ಕಾರಣಕ್ಕಾಗಿ ಸುರೇಶ್ ಅವರನ್ನು ಸೋಲಿಸಿ ಶಿವಕುಮಾರ್ ಬಲ ಕುಗ್ಗಿಸುವ ಮೊದಲ ಪ್ರಯತ್ನ ಮಾಡಿದ್ದಾರೆ.

ಸುರೇಶ್ ಸೇರಿದಂತೆ ರಾಜ್ಯದಲ್ಲಿ ಕೆಲವರನ್ನು ಸೋಲಿಸಲು ಸಿದ್ದರಾಮಯ್ಯ ಮತ್ತವರ ಬಳಗ ಚುನಾವಣೆಗೂ ಮುನ್ನವೇ ತಂತ್ರ ಹೂಡಿತ್ತು.

ಇದೇ ಕಾರಣಕ್ಕಾಗಿ ಸಚಿವರಾದ ಡಾ.ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ರಾಜಣ್ಣ ಸೇರಿದಂತೆ ಅಹಿಂದ ಸಚಿವರುಗಳು ನಿರಂತರ ಸಭೆ ನಡೆಸಿದ್ದರು.

ನನಗೆ ಮೊದಲೇ ಈ ವಿಷಯ ತಿಳಿದಿತ್ತು, ನಾನು ಚುನಾವಣೆಗೂ ಮುನ್ನವೇ ಸುರೇಶ್ ಅವರನ್ನು ಈ ಬಾರಿ ಎರಡು ಲಕ್ಷ ಮತಗಳ ಅಂತರಗಳಿಂದ ಸೋಲಿಸುತ್ತಾರೆ ಎಂದು ಹೇಳಿದ್ದೆ, ಅಂದು ಯಾರೂ ನಂಬಲಿಲ್ಲ, ಇದೀಗ ಅವರು ಎರಡು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ ಎಂದವರು ಹೇಳಿದ್ದಾರೆ.

## ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ; ಬಂಧನ

ಬಲಿಯಾ, ಜೂ. 8 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಮೇಲೆ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ ಎಂದು ಉತ್ತರ ಪ್ರದೇಶದ ಪೊಲೀಸರು ಹೇಳಿದ್ದಾರೆ.

ಮನಿಯಾರ್ ನಗರದ ನಿಖಿಲ್ ಗುಪ್ತ ಎಂಬುವವರು ನೀಡಿದ ದೂರು ಆಧರಿಸಿ ಮೊಹಮ್ಮದ್ ಆಸಿಫ್ ಎಂಬುವವರನ್ನು ಬಂಧಿಸಲಾಗಿದೆ.

ಜೂನ್ 1ರಂದು ನನಗೆ ಕರೆ ಮಾಡಿದ್ದ ಆಸಿಫ್, ಪ್ರಧಾನಿ ಮೋದಿ ಹಾಗೂ ಮುಖ್ಯಮಂತ್ರಿ ಆದಿತ್ಯನಾಥ್ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದ. ಈ ಮಾತುಗಳನ್ನು ಕೇಳದೇ ಇದ್ದರೆ ಹತ್ಯೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಎಂದು ಗುಪ್ತ ಹೇಳಿದ್ದಾರೆ. ನಂತರ ಆಸಿಫ್ ಈ ಸಂಭಾಷಣೆಯನ್ನು ದಾಖಲಿಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದಾನೆ ಎಂದು ಗುಪ್ತ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

## ರಾಣೇಬೆನ್ನೂರಿನಲ್ಲಿ ನೇಕಾರ ಪದ್ಮಶಾಲಿ ಸಮಾಜದಿಂದ ಪ್ರತಿಭಾ ಪುರಸ್ಕಾರ

ರಾಣೇಬೆನ್ನೂರು, ಜೂ. 8 - ಹಾವೇರಿ ಜಿಲ್ಲೆಯ ನೇಕಾರ ಪದ್ಮಶಾಲಿ ಸಮಾಜ ಸೇವಾ ಸಂಘದ ವತಿಯಿಂದ ಹಾವೇರಿ ಜಿಲ್ಲೆಯ ಪದ್ಮಶಾಲಿ ಸಮಾಜದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ 2023-24ರಲ್ಲಿ ನಡೆದ ಪರೀಕ್ಷೆಯಲ್ಲಿ 90% ಅಂಕಗಳನ್ನು ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಅರ್ಜಿಯನ್ನು ಟಿ. ಹನುಮಂತಪ್ಪ ಮುಕ್ತೇನಹಳ್ಳಿ, 96323 53436, ಶ್ರೀಗುರು ಮಾರ್ಕಂಡೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ. ಕೆ.ಬಿ. ರೋಡ್ ರಾಣೇಬೆನ್ನೂರು : 82776 44552, ಶ್ರೀ ಮಾರುತಿ ಗರಡಿಮನಿ 99458 91736 ಇವರಿಗೆ ನಾಡಿದ್ದು ದಿನಾಂಕ 10ರೊಳಗೆ ತಲುಪಿಸಬಹುದು.

## ಕುಂಬಳೂರು : ಇಂದು ಸಿಹಿ ಲಾಡು ವಿತರಣೆ

ನರೇಂದ್ರ ಮೋದಿ ಅವರು 3ನೇ ಬಾರಿಗೆ ಭಾರತದ ದೇಶದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಹಿನ್ನೆಲೆಯಲ್ಲಿ ಇಂದು ಸಂಜೆ 7 ಗಂಟೆಗೆ ಕುಂಬಳೂರು ಗ್ರಾಮದ ಪ್ರತಿ ಮನೆಗೂ ಸಿಹಿ ಲಾಡು ವಿತರಿಸಲಾಗುವುದೆಂದು ಡಿ.ಕೆ.ಸ್ವಾಮಿ ತಿಳಿಸಿದ್ದಾರೆ.

**ಸಿಹಿ ಹಂಚಿಕೆ :** ನರೇಂದ್ರ ಮೋದಿ ಅವರು 3ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವುದರಿಂದ ಇಂದು ಬೆಳಿಗ್ಗೆ 9 ಗಂಟೆಗೆ ಕುಂಬಳೂರಿನ ಮುಖ್ಯ ವೃತ್ತದಲ್ಲಿ ಕೆ.ಕಾಮರಾಜ್ ಅವರು ಸಿಹಿ ವಿತರಣೆ ಮಾಡಲಿದ್ದಾರೆ.



### ಹೆಚ್.ಆರ್. ಗಂಗಾಂಭಿಕ ನಿಧನ

ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ
ದಿ. ಡಿ. ಶಿವಪ್ರಸಾದ ಇವರ ಧರ್ಮಪತ್ನಿ
**ಶ್ರೀಮತಿ ಹೆಚ್.ಆರ್. ಗಂಗಾಂಭಿಕ (94)**
ಇವರು ದಿನಾಂಕ 8.6.2024ರ ಶನಿವಾರ ರಾತ್ರಿ 9.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 9.6.2024ರ ಭಾನುವಾರ ಮಧ್ಯಾಹ್ನ 3 ಕ್ಕೆ ಪಿ.ಬಿ.ರಸ್ತೆಯ ಹಾಲವರ್ತಿ ಹೊಸ ಬಡಾವಣೆಯಲ್ಲಿರುವ ಜಮೀನಿನಲ್ಲಿ ನೆರವೇರಲಿದೆ.
**ದುಃಖತಪ್ತ ಕುಟುಂಬ ವರ್ಗ, ಮೊ : 70225 27291, 82174 43069**

### ಒಂಭತ್ತನೇ ವರ್ಷದ ಪುಣ್ಯಸ್ಮರಣೆ



**ದಿ|| ಶರಣೆ ಶ್ರೀಮತಿ**
**ಕಾಯಕ ಯೋಗಿ ಚನ್ನಬಸಮ್ಮ**
(ಶ್ರೀ ದಿ|| ಕರಿಯಪ್ಪ ದುಂಡಜ್ಜನವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ
ಒಂಭತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ
**ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಸಹೋದರ, ಸಹೋದರಿಯರು ಮತ್ತು ಬಂಧು-ಮಿತ್ರರು, ದಾವಣಗೆರೆ.**

# ಕುಂಬಳೂರಿನಲ್ಲಿ ಇಂದು ಗುರುವಂದನಾ ಕಾರ್ಯಕ್ರಮ



ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಶ್ರೀ ಬಸವ ಗುರುಕುಲ ವಿದ್ಯಾಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಬಿ. ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಕೆ. ಸಿರಸಾಚಾರ್ ಮತ್ತು ಶಿಕ್ಷಕರುಗಳಿಗೆ ಇಂದು ಬೆಳಿಗ್ಗೆ 10ಕ್ಕೆ ಗುರು ವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಶರಣ ಸಂಗಮ ಪೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಎಂ.ಎಸ್. ಮಂಜುನಾಥ್, ಭೀಮಸಮುದ್ರ ತರಳಬಾಳು ವಿದ್ಯಾಸಂಸ್ಥೆಯ ನಿವೃತ್ತ ಮುಖ್ಯ ಶಿಕ್ಷಕ ಎಸ್. ಮಂಜುನಾಥಚಾರಿ ಭಾಗವಹಿಸಲಿದ್ದು, ಬಿ. ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕರಾದ ಎ.ಬಿ. ಹನುಮಂತಪ್ಪ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ 9 ಗಂಟೆಗೆ ಸಿದ್ಧವೀರಪ್ಪ ವೃತ್ತದಿಂದ ಶಿಕ್ಷಕರನ್ನು ಬಸವ ಗುರುಕುಲದವರೆಗೆ ಮೆರವಣಿಗೆಯಲ್ಲಿ ಕರೆತರಲಾಗುವುದು.

**ಗುರುಕುಲ ಬೆಳೆದುಬಂದ ದಾರಿ:** ಕುಂಬಳೂರ ಗ್ರಾಮದಲ್ಲಿ 1983ರಲ್ಲಿ ಶರಣ ದಂಪತಿಗಳಾದ ಶಿವಾನಂದ ಗುರೂಜಿ ಮತ್ತು ಸುಮಂಗಲಾದೇವಿ ಅವರ ಇಚ್ಛಾಶಕ್ತಿಯಿಂದ ಗ್ರಾಮದ ಹಿರಿಯರಾದ ಹೊರಟ್ಟಿ ಭೀಮಪ್ಪನವರು ನೀಡಿದ ಅರ್ಧ ಎಕರೆ ಜಾಗದಲ್ಲಿ ಶ್ರೀ ಬಸವ ಗುರುಕುಲ ವಿದ್ಯಾಸಂಸ್ಥೆಯು ಉದಯವಾಯಿತು. ಊರಿನ ಹಿರಿಯರ ಬೆಂಬಲದೊಂದಿಗೆ ಶ್ರೀ ಬಸವ ಗುರುಕುಲ ವಿಶ್ವಸ್ಥ ಸಮಿತಿ ಮೂಲಕ ಸಮಾಜ ಸುಧಾರಣೆ, ಶಿಕ್ಷಣ ಮತ್ತು ಸಾಮಾಜಿಕ ಮೌಲ್ಯಗಳ ಉನ್ನತೀಕರಣಕ್ಕೆ ಶ್ರಮಿಸಿದರು.


ವಿಶ್ವಸ್ಥ ಸಮಿತಿ ಸದಸ್ಯರಾದ ಕೆ. ಹನುಮಂತಪ್ಪ ಮಹೇಶ್ವರಪ್ಪ ಎನ್, ದಾನಪ್ಪ ಕೆ.ಎಚ್ ಹಳೇಮನೆ, ಭೇರಮನ್ ಬಸಪ್ಪ, ದುರ್ಗದ ಬಸಪ್ಪಜ್ಜ, ಕರಿಯಪ್ಪರ ಹಾಲಪ್ಪ, ಕೆ.ಜಿ. ಹನುಮಂತಪ್ಪ, ಶಿವಪ್ಪ ಶಿಕ್ಷಕರು ಹಾಗೂ ಗ್ರಾಮದ ಹಿರಿಯರ ಬೆಂಬಲದೊಂದಿಗೆ 1984ರಿಂದ ಎಲ್ ಕೆಜಿ, ಯುಕೆಜಿ ತರಗತಿ ಆರಂಭಿಸಲಾಯಿತು. ಅಂದಿನಿಂದ ಇಂದಿನವರೆಗೂ ವಸತಿ ಸಹಿತ ಮತ್ತು ವಸತಿ ರಹಿತವಾಗಿ ಸುಮಾರು 2500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ.

ಸಂಸ್ಥೆಯ ಅಡಿಯಲ್ಲಿ 1985-86ರಿಂದ ಶ್ರೀ ಗುರುಬಸವ ಹಿರಿಯ ಪ್ರಾಥಮಿಕ ಶಾಲೆ ಮತ್ತು 1992-93ರಿಂದ ಶರಣ ಸಂಗಮ ಪೌಢ ಶಾಲೆ ಹಾಗೂ 2017-18ರಿಂದ ಶ್ರೀ ಗುರುಬಸವ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, 2021-22ರಿಂದ ಶ್ರೀ ಬಸವ ಗುರುಕುಲ ಆಂಗ್ಲ ಮಾಧ್ಯಮ ಪೌಢ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ.

1985-86ರ ಶೈಕ್ಷಣಿಕ ಸಾಲಿನಿಂದ ಒಂದನೇ ತರಗತಿಯೊಂದಿಗೆ ಪ್ರಾರಂಭವಾದ ಶ್ರೀ ಬಸವ ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯು 1996ರಲ್ಲಿ ಸರ್ಕಾರದ ಅನುದಾನಕ್ಕೆ ಒಳಪಟ್ಟಿತು. 1998ರಲ್ಲಿ ಶಾಲೆಯ ಹೆಸರನ್ನು ಶರಣ ಬಿ. ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆ ಎಂದು ಮರುನಾಮಕರಣ ಮಾಡಲಾಯಿತು. ವಿಕಲ ಚೇತನರಾಗಿದ್ದ ಕೆ. ಸಿರಸಾಚಾರ್ ಅವರು ಸುಲಭವಾಗಿ ಸಿಗಬಹುದಾಗಿದ್ದ ಸರ್ಕಾರಿ ಹುದ್ದೆಯನ್ನು ಬಿಟ್ಟು ಈ ಶಾಲೆಯಲ್ಲಿ ನೆಲೆನಿಂತು ಶಾಲೆ ಮತ್ತು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದ್ದನ್ನು ಶಿಷ್ಯ ವೃಂದ ಹಾಗೂ ಗ್ರಾಮಸ್ಥರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

1984ರಿಂದ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ಕಳೆದ ಮೇ 31ರಂದು ನಿವೃತ್ತರಾದ ಕೆ. ಸಿರಸಾಚಾರ್ ಅವರಿಗೆ ಮತ್ತು ಸಂಸ್ಥೆಯ ಪ್ರಾರಂಭವಾದಾಗಿನಿಂದ ಇಂದಿನವರೆಗೆ ಸೇವೆ ಸಲ್ಲಿಸಿದ ಎಲ್ಲಾ ಶಿಕ್ಷಕ- ಶಿಕ್ಷಕಿಯರಿಗೆ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಗುರುವಂದನಾ ಕಾರ್ಯಕ್ರಮವನ್ನು ಹಿರಿಯ-ಕಿರಿಯ ವಿದ್ಯಾರ್ಥಿಗಳು ಸೇರಿ ಸಂಘಟಿಸಿದ್ದಾರೆ.

## ನಗರದಲ್ಲಿ ಇಂದು ಡಾ.ಈಶ್ವರಪ್ಪರಿಗೆ ನುಡಿ ನಮನ



ಪ್ರತಿಮಾ ಸಭಾದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ಹಿರಿಯ ಸಾಹಿತಿ ಡಾ.ಎಂ.ಜಿ. ಈಶ್ವರಪ್ಪ ಅವರಿಗೆ 'ನುಡಿ ನಮನ' ಕಾರ್ಯಕ್ರಮ ನಡೆಯಲಿದೆ.

ಪ್ರತಿಮಾಸಭಾದ ಸಂಸ್ಥಾಪಕ ಅಧ್ಯಕ್ಷ ಪ್ರೊ. ಎಸ್. ಹಾಲಪ್ಪ ಅಧ್ಯಕ್ಷತೆ ವಹಿಸುವರು. ಹಿರಿಯ ರಂಗಕರ್ಮಿ, ಸಾಂಸ್ಕೃತಿಕ ಸಂಘಟಕ ಶ್ರೀನಿವಾಸ್ ಜಿ. ಕಪ್ಪಣ್ಣ, ಹಿರಿಯ ಕಾದಂಬರಿಕಾರ ಕುಂ. ವೀರಭದ್ರಪ್ಪ, ಪ್ರತಿಮಾ ಸಭಾದ ಸಂಸ್ಥಾಪಕ ನಿರ್ದೇಶಕ ಪ್ರೊ.ಜಿ.ಎನ್. ಸತ್ಯಮೂರ್ತಿ ಅವರು ನುಡಿ ನಮನ ಸಲ್ಲಿಸಲಿದ್ದಾರೆ.

ಡಾ.ಎಂ.ಜಿ.ಈಶ್ವರಪ್ಪ ಅವರ ಪತ್ನಿ ಶ್ರೀಮತಿ ಬಸಮ್ಮ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ಜರುಗಲಿದೆ. ಗಾನ ಲಹರಿ ಸಂಗೀತ ವಿದ್ಯಾಲಯದ ಕಲಾವಿದರು ರಂಗ ಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬೀರೇಶ್ವರ ನಗರ, ವಿದ್ಯಾನಗರ, ಗೌರಿಶಂಕರ ನಗರ, ಉಮಾಶಂಕರ ನಗರ, ಪಿ.ಬಿ. ರಸ್ತೆ, ಹುಣಸಿಕಟ್ಟೆ ರಸ್ತೆ, ವಾಗೀಶ ನಗರ, ಮೆಡ್ಲೇರಿ ರಸ್ತೆ, ಚೌಡೇಶ್ವರಿ ನಗರ, ಪಂಪಾನಗರ, ವಿನಾಯಕನಗರ, ರಾಜೇಶ್ವರಿ ನಗರ, ಶಬರಿ ನಗರ, ಸೃಷ್ಟಿ ಡೆವಲಪರ್ಸ್, ಕೆಹೆಚ್‌ಬಿ ಫೇಸ್-1, 2, ಮಾಗೋಡ ರಸ್ತೆ, ಬಸವ ಗ್ರೀನ್ ಪಾರ್ಕ್, ಚನ್ನೇಶ್ವರ ನಗರ ಮತ್ತು ಪಾರ್ವತಿ ಲೇಔಟ್‌ಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಮಳೆಯಿಂದ ಎರಡು ವಾಸದ ಮನೆಗಳು ಭಾಗಶಃ ಹಾನಿ



ಹರಪನಹಳ್ಳಿ, ಜೂ. 8 - ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಕಳೆದ ಎರಡು ದಿನಗಳಿಂದ ಉತ್ತಮ ಮಳೆಯಾಗುತ್ತಿದ್ದು, ಮಳೆಯಿಂದ ತಾಲ್ಲೂಕಿನಲ್ಲಿ ಎರಡು ವಾಸದ ಮನೆಗಳು ಭಾಗಶ ಹಾನಿಯಾಗಿವೆ. ನಂದಿಬೇವೂರು ಗ್ರಾಮದ ಕುರಿ ಶೇಖರಪ್ಪ ಹಾಗೂ ಹಂಚಿನ ಬಸವರಾಜಪ್ಪ ಎಂಬುವವರಿಗೆ ಸೇರಿದ ಮನೆಗಳು ಮಳೆಗೆ ಮೇಚ್ಛಾವಣಿ ಕುಸಿದು ಬಿದ್ದು ಭಾಗಶ ಹಾನಿಯಾಗಿವೆ ಎಂದು ತಹಶೀಲ್ದಾರ್ ಗಿರೀಶಬಾಬು ತಿಳಿಸಿದ್ದಾರೆ.

ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ 1.4 ಮಿ.ಮೀ ಮಳೆಯಾಗಿದ್ದು, ಅರಸೀಕೆರೆ 3.1 ಮಿ.ಮೀ, ತೆಲಗಿ 6.4 ಮಿ.ಮೀ, ಹಿರೇಮೇಗಳಗೆರೆ, ಹಲವಾಗಲು, ಉಚ್ಚಂಗಿದುರ್ಗ ಸೇರಿ ಒಟ್ಟು 49.7 ಮಿ.ಮೀ ಮಳೆಯಾಗಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

### ನ್ಯಾಮತಿ ಕುಡಪ್ಲಿ ಶರಣಮ್ಮ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ, 3ನೇ ಮೇನ್, 3ನೇ ಕ್ರಾಸ್, ಸಾಧನ ಅಪಾರ್ಟ್‌ಮೆಂಟ್ ಎದುರು (# 2512/7) ವಾಸಿ, ಎನ್.ಕೆ. ರುದ್ರಪ್ಪ ಇವರ ಧರ್ಮಪತ್ನಿ ಶ್ರೀಮತಿ ನ್ಯಾಮತಿ ಕುಡಪ್ಲಿ ಶರಣಮ್ಮ (78)ಅವರು ದಿನಾಂಕ 8-6-2024ರ ಶನಿವಾರ ರಾತ್ರಿ 8.50ಕ್ಕೆ ನಿಧನರಾದರು. ಮೂವರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 9-6-2024ರ ಭಾನುವಾರ ಮಧ್ಯಾಹ್ನ 1 ಕ್ಕೆ ಹಗೇದಿಬ್ಬ ಸರ್ಕಲ್ ರಸ್ತೆಯಲ್ಲಿರುವ ಹಿಂದೂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ರಾಹುಲ್ ವಿಪಕ್ಷ ನಾಯಕರಾಗಲಿ

**(1ನೇ ಪುಟದಿಂದ)** ಗಳಿಸಿದ ಸ್ಥಾನಗಳ ಸಂಖ್ಯೆ ವಿಪಕ್ಷ ನಾಯಕನ ಸ್ಥಾನ ಪಡೆಯುವಷ್ಟಿರಲಿಲ್ಲ.

ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಉತ್ಸಾಹಗೊಂಡಿದ್ದಾರೆ. ಕಾಂಗ್ರೆಸ್ ಪುನಶ್ಚೇತನ ಆರಂಭವಾಗಿದೆ ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಭಾವನೆ ಮೂಡಿದೆ ಎಂದು ವೇಣುಗೋಪಾಲ್ ತಿಳಿಸಿದರು.

ಲೋಕಸಭಾ ಚುನಾವಣೆಯ ಸಾಧನೆಗಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಅವರನ್ನು ಅಭಿನಂದಿಸಲು ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಲಾಯಿತು.

ಇದೇ ವೇಳೆ ಕಾಂಗ್ರೆಸ್ ಸಾಧನೆಯ ಶ್ರೇಯವನ್ನು ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆಗೆ ಸಲ್ಲಿಸಲು ನಿರ್ಧರಿಸಲಾಯಿತು.

ಲೋಕಸಭಾ ಚುನಾವಣಾ ಫಲಿತಾಂಶ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ರಾಜಕೀಯ, ವೈಯಕ್ತಿಕ ನಷ್ಟ ಹಾಗೂ ನೈತಿಕ ಸೋಲು ಎಂದೂ ಕಾಂಗ್ರೆಸ್ ಕಾರ್ಯಕಾರಣಿ ನಿರ್ಣಯದಲ್ಲಿ ಹೇಳಲಾಗಿದೆ.

## 'ಪ್ರಚಂಡ ಕುಳ್ಳ' ಕನಸುಗಾರ, ಛಲಗಾರ

**(1ನೇ ಪುಟದಿಂದ)** ಕುಮಾರ್ ಅವರ ಬಳಿ ಹಾಡು ಹಾಡಿಸಿದರು. ತಾವು ಕಂಡ ಕನಸುಗಳನ್ನು ನನಸು ಮಾಡಿಕೊಳ್ಳುತ್ತಲೇ ಬಂದರು.

ದುರದೃಷ್ಟವಶಾತ್ ಸತತವಾಗಿ 18 ಚಿತ್ರಗಳಲ್ಲಿ ನಷ್ಟ ಅನುಭವಿಸಿದರೂ ಧೃತಿಗೆಡದೆ ಚಿತ್ರ ರಂಗದಲ್ಲಿ ಸಾಕಷ್ಟು ಕೊಡುಗೆ ನೀಡಿದ್ದರು ಎಂದು ಹೇಳಿದರು.

ದ್ವಾರಕೀಶ್ ಅವರು ನನಗೆ ಭಾಗ್ಯವಂತರು ಚಿತ್ರಕ್ಕೆ ನಿರ್ದೇಶನದ ಜವಾಬ್ದಾರಿ ನೀಡಿದ್ದು ನನ್ನನ್ನೂ ಭಾಗ್ಯವಂತ ನನ್ನಾಗಿ ಮಾಡಿತು ಎಂದು ಭಾರ್ಗವ ನೆನಪಿಸಿಕೊಂಡರು.

ಬೆಂಗಳೂರಿನ ಸಿನಿಮಾ ಸಂಸ್ಥೆಗಳು ದ್ವಾರಕೀಶ್ ಅವರ ಕುರಿತ ಯಾವ ಕಾರ್ಯಕ್ರಮಗಳನ್ನೂ ಮಾಡಿಲ್ಲ. ಆದರೆ ದಾವಣಗೆರೆಯ ಸಿನಿಮಾ ಸಿರಿಯವರು ದ್ವಾರಕೀಶ್ ಅವರಿಗೆ ನುಡಿ ನಮನ ಸಲ್ಲಿಸುತ್ತಿರುವುದು ಹೆಮ್ಮೆಯ ವಿಚಾರ ಎಂದು ಶ್ಲಾಘಿಸಿದರು.

ಸಿನಿಮಾ ಸಿರಿಯ ಪರಿಕಲ್ಪನಾ ನಿರ್ದೇಶಕ ಸುರಭಿ ಶಿವಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, 1998 ರಲ್ಲಿ ಸಂಗೀತ ಪ್ರೇಮಿಗಳಿಂದ ಆರಂಭವಾದ ಈ ಸಂಸ್ಥೆ ಇಂದು ಬೆಳ್ಳಿ ಮಹೋತ್ಸವ ಆಚರಿಸಿಕೊಳ್ಳುವತ್ತ ಸಾಗಿದೆ ಎಂದರು. ಸಿನಿಮಾ ಸಿರಿ ಅಧ್ಯಕ್ಷ ಅಂದನೂರು ಮುಪ್ಪಣ್ಣ ಅಧ್ಯಕ್ಷತೆ ವಹಿಸಿದ್ದರು. ಭಾರ್ಗವ ಅವರ ಪತ್ನಿ ಪರಿಮಳ, ಟಿ.ಎಂ. ಪಂಚಾಕ್ಷರಯ್ಯ, ಆರ್.ಟಿ. ಮೃತ್ಯುಂಜಯ, ಎನ್. ವಿ. ಬಂಡಿವಾಡ, ಡಾ.ಬಿ.ಎಸ್. ನಾಗಪ್ರಕಾಶ್, ಹೆಚ್.ವಿ. ಮಂಜುನಾಥ ಸ್ವಾಮಿ ವೇದಿಕೆ ಮೇಲಿದ್ದರು. ಸಾಲಿಗ್ರಾಮ ಗಣೇಶ ಶೆಣೈ ನಿರೂಪಿಸಿದರು.

### ತುಂತುರು ಮಳೆ... ಸಂಗೀತದ ಅಲೆ...

ಶನಿವಾರ ಸಂಜೆ ಹೊರಗಡೆ ತುಂತುರು ಮಳೆ ಜಿನುಗುತ್ತಿದ್ದರೆ, ನಗರದ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದ ಒಳಗಡೆ ಸಂಗೀತ ಪ್ರಿಯರು 'ಸಂಗೀತದ ಅಲೆ'ಯಲ್ಲಿ ತೇಲಿದರು.

ಮುಂಜಾನೆಯಿಂದಲೇ ಜಿನುಗುತ್ತಿದ್ದ ಜಿಟಿ ಜಿಟಿ ಮಳೆಯನ್ನೂ ಲೆಕ್ಕಿಸದ ಜನರು ಸಂಗೀತದ ಮಳೆಯಲ್ಲೂ ಮಿಂದೇಳಲು ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದತ್ತ ದೌಡಾಯಿಸಿದ್ದರು.

ದ್ವಾರಕೀಶ್ ಚಿತ್ರಗಳ ಹಾಡುಗಳನ್ನು ಹೇಳಿದ ಗಾಯಕರುಗಳಾದ ಎಂ.ಬಿ. ಜಗದೀಶ್, ಆರ್.ಟಿ. ಮೃತ್ಯುಂಜಯ, ವಿ.ಶಶಿ, ಹೇಮಂತ್, ಜಗದೀಶ್ ಬೇತೂರು, ಸಂಗೀತಾ ರಾಘವೇಂದ್ರ, ಟಿ.ಶೋಭಾ ಭೇಷ್ ಎನಿಸಿಕೊಂಡರು.

## ಮೋದಿ ಸಂಪುಟಕ್ಕೆ ಜೋಷಿ, ಕುಮಾರಸ್ವಾಮಿ?

**(1ನೇ ಪುಟದಿಂದ)** ಗದ್ದಿಗೌಡರ್ ಐದನೇ ಬಾರಿಗೆ ಲೋಕ ಸಭೆ ಪ್ರವೇಶಿಸಿರುವುದರಿಂದ ಹಿರಿತನದಲ್ಲಿ ಮಂತ್ರಿ ಸ್ಥಾನ ದಕ್ಕಲಿದೆ ಎಂದು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಯಡಿಯೂರಪ್ಪ ಮಾತ್ರ ಪುತ್ರನಿಗೆ ಅಧಿಕಾರ ಕೊಡಿಸಲು ತಮ್ಮ ಪ್ರಭಾವ ಬೀರಿದ್ದಾರೆ. ಆದರೆ ಕರ್ನಾಟಕಕ್ಕೆ ಮೂರನೇ ಸ್ಥಾನ ಕೊಡುವ ಬಗ್ಗೆ ಇಂದು ತಡರಾತ್ರಿ ನಿರ್ಧಾರವಾಗಲಿದೆ.

ಪ್ರಹ್ಲಾದ್ ಜೋಷಿ ಅವರನ್ನು ಲೋಕಸಭಾ ಅಧ್ಯಕ್ಷ ಸ್ಥಾನಕ್ಕೆ ತರಬೇಕೆಂಬ ಮಾತು ಬಿಜೆಪಿ ವಲಯದಲ್ಲಿ ಕೇಳಿಬರುತ್ತಿದೆ, ಒಂದು ವೇಳೆ ಅವರನ್ನು ಈ ಹುದ್ದೆಗೆ ಸೀಮಿತಗೊಳಿಸಿದರೆ, ಪಂಚ ಮುಖಂಡರಲ್ಲಿ ಒಬ್ಬರಿಗೆ ಅಧಿಕಾರ ಖಚಿತ. ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ನಾಳೆ ಸಂಜೆ ಪ್ರಮಾಣವಚನ ಸ್ವೀಕರಿಸಲಿದ್ದು ಇದಕ್ಕಾಗಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಸೇರಿದಂತೆ ರಾಜ್ಯದ ಹಲವು ಬಿಜೆಪಿ ಮುಖಂಡರು ಮತ್ತು ಮಾಜಿ ಸಂಸದರಿಗೆ ಪ್ರಧಾನಿ ಕಾರ್ಯಾಲಯದಿಂದಲೇ ಆಹ್ವಾನ ಬಂದಿದೆ.




**ದಿನಾಂಕ : 09.06.2024 ರಿಂದ 15.06.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನಿಮ್ಮ ಕೆಲಸ ಕಾರ್ಯಗಳನ್ನು ನೆರವೇರಿಸಿಕೊಳ್ಳಲು ಉತ್ಸಾಹದಿಂದ ಮುನ್ನುಗ್ಗುವಿರಿ, ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ತುಸು ವ್ಯತ್ಯಾಸ ವಾಗಲಿದೆ, ಆದಾಯದ ವಿಚಾರದಲ್ಲಿ ನಿರೀಕ್ಷಿತ ಮಟ್ಟದಲ್ಲಿರುವುದ ರಿಂದ ಅದರ ಚಿಂತೆ ಬೇಡ, ಹಲವು ಪ್ರಸಂಗಗಳಲ್ಲಿ ಹೆಚ್ಚಿನ ಖರ್ಚು ಅನಿವಾರ್ಯ, ಹಳೆಯ ಕಾಯಿಲೆಗಳನ್ನು ಅಲಕ್ಷಿಸಬೇಡಿ, ನಿಮ್ಮ ಅಭಿಪ್ರಾಯಗಳನ್ನು ಎಲ್ಲರೂ ಒಪ್ಪುವರೆಂಬ ಭ್ರಮೆ ಬೇಡ. ಮಂಗಳ-ಗುರು-ಶುಕ್ರ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವೈಯಕ್ತಿಕ ಸಮಸ್ಯೆಗಳು ಅನೇಕವಿದ್ದರೂ ಏನೂ ನಡೆದೇ ಇಲ್ಲವೇನೋ ಎಂಬ ಗತ್ತಿನಲ್ಲೇ ನಡೆಯುವಿರಿ, ಕೌಟುಂಬಿಕ ವಿಷಯದಲ್ಲಿ ಮನೆ ಸದಸ್ಯರು ವಿರೋಧ ವ್ಯಕ್ತಪಡಿಸುವರು, ಆದಾಯದ ವಿಚಾರದಲ್ಲಿ ಸಂತುಷ್ಟರಾಗಿರುವಿರಿ, ಸೋದರನು ಆಸ್ತಿ ಕೊಳ್ಳುವ ವಿಚಾರದಲ್ಲಿ ಅನೇಕ ತಾಂತ್ರಿಕ ಸಮಸ್ಯೆಗಳು ಕಾಣಿಸಿಕೊಳ್ಳಲಿವೆ, ಅದರ ಪರಿಹಾರ ನಿಮ್ಮಿಂದ ಮಾತ್ರ ಸಾಧ್ಯ. ಸಂಘ-ಸಂಸ್ಥೆಗಳಿಗೆ ನಿವೇಶನ ಪ್ರಾಪ್ತಿಯಾಗುವ ಯೋಗವಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಹಣಕಾಸಿನ ಸ್ಥಿತಿಗತಿ ಸಾಮಾನ್ಯವಾಗಿರುವುದರಿಂದ ಖರ್ಚು-ವೆಚ್ಚಗಳ ಮೇಲೆ ಹಿಡಿತ ಮಾಡುವುದು ಮೇಲು. ಅರೆ ಸರ್ಕಾರಿ ಸಂಸ್ಥೆಗಳಿಗೆ ಸರ್ಕಾರದಿಂದ ಬರುತ್ತಿರುವ ನೆರವು ನಿಂತುಹೋಗುವ ಸಾಧ್ಯತೆಯಿದೆ, ವಾರದ ಆರಂಭದಲ್ಲಿ ವಿಪರೀತ ಗೊಂದಲ ಕಾಣಿಸಿಕೊಳ್ಳಲಿವೆ. ವಿದ್ಯಾರ್ಥಿಗಳ ಅಧ್ಯಯನದಲ್ಲಿ ತುಸು ಹಿನ್ನಡೆ ಕಾಣಲಿದೆ, ಅಲಂಕಾರಿಕ ವಸ್ತುಗಳ ಖರೀದಿ ಯಿಂದಾಗಿ ಅನಾವಶ್ಯಕ ಖರ್ಚಿನಿಂದ ಹೈರಾಣಾಗುವಿರಿ, ಗೋ ಸೇವೆ ಮಾಡಿ. ಸೋಮ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ನೀವು ತೋರುವ ಆಲಸ್ಯವೇ ಕೆಲವೊಮ್ಮೆ ಆರಂಭಿಸಿದ ಯೋಜನೆಯ ಹಿನ್ನಡೆಗೆ ಕಾರಣವಾಗಬಹುದು, ಮಹಿಳೆಯರಾಡುವ ಮಾತಿನಿಂದ ಮನೆಯಲ್ಲಿ ಕಾವೇರಿದ ವಾತಾವರಣವುಂಟಾಗಲಿದೆ. ಇದನ್ನು ಹಿರಿಯರೇ ಬಗೆಹರಿಸುವರು, ಎಲ್ಲರೂ ತುಸು ತಾಳ್ಮೆಯಿಂದಿರುವುದು ಮೇಲು. ಆರೋಗ್ಯದ ವಿಷಯದಲ್ಲಿ ಉದಾಸೀನತೆ ಬೇಡ, ಪ್ರಸಂಗ ಬಂದಲ್ಲಿ ತಜ್ಞ ವೈದ್ಯರ ಸಂಪರ್ಕದಲ್ಲಿರುವುದು ಮೇಲು, ವಿದ್ಯಾರ್ಥಿಗಳಿಗೆ ಉತ್ತಮದಿನ. ಭಾನು-ಸೋಮ-ಮಂಗಳ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆತ್ಮಾಭಿಮಾನ ಒಳ್ಳೆಯದೇ ಆದರೂ ಅದು ಅತಿಯಾದಲ್ಲಿ ದುರಹಂಕಾರಕ್ಕೆ ಕಾರಣವಾಗಬಹುದು, ನಿರ್ಧಾರಗಳಲ್ಲಿ ದ್ವಂದ್ವನೀತಿ ಬೇಡ, ಆಸ್ತಿ ಅಥವಾ ಹೊಸಮನೆ ಖರೀದಿ ವಿಚಾರವನ್ನು ಸದ್ಯದ ಮಟ್ಟಿಗೆ ಮುಂದೂಡುವುದು ಮೇಲು. ಹೊಸ ವೃತ್ತಿ ಆರಂಭಿಸುವ ಮೊದಲು ಮಕ್ಕಳ ಬೆಂಬಲ ಪಡೆಯಿರಿ, ಸಂಗಾತಿಯು ನಿಮ್ಮ ನಡಾವಳಿಯ ಬಗ್ಗೆ ಪ್ರತಿರೋಧ ವ್ಯಕ್ತಪಡಿಸಬಹುದು, ಊಟೋಪಚಾರದಲ್ಲಿ ಇತಿಮಿತಿಯಿರಲಿ. ಭಾನು-ಬುಧ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಎಷ್ಟೇ ಶ್ರಮಪಟ್ಟರೂ ಪ್ರತಿಫಲ ಮಾತ್ರ ಅಷ್ಟಕ್ಕಷ್ಟೇ ಇರುವುದರಿಂದ ಒಂದು ರೀತಿಯ ಹತಾಶೆ ಭಾವ ನಿಮ್ಮಲ್ಲಿ ಮೂಡಲಿದೆ, ಅನಿರ್ದಿಷ್ಟ ಆದಾಯ ಆರ್ಥಿಕ ಅಸಮತೋಲನೆಗೆ ಕಾರಣವಾಗಲಿದೆ, ಹಿರಿಯರ ಆಸ್ತಿಯಲ್ಲಿ ಪಾಲು ಬರಬಹುದಾದರೂ, ಅದಕ್ಕೆ ಹಲವರಿಂದ ಅಡ್ಡಿ ಆತಂಕಗಳು ಎದುರಾಗಲಿವೆ, ಗಣಿ ಕೈಗಾರಿಕೆಯಲ್ಲಿ ತೊಡಗಿಕೊಂಡವರಿಗೆ ಕಾನೂನಾತ್ಮಕ ಸಮಸ್ಯೆಗಳು ಎದುರಾಗಬಹುದು, ಉಸಿರಾಟದ ತೊಂದರೆ ಕಾಡಲಿದೆ. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಯುವಜನರು ತಮ್ಮ ನಡಾವಳಿಯಿಂದ ಕುಟುಂಬದ ಆಗು ಹೋಗುಗಳ ಬಗ್ಗೆ ಚಿಂತಿಸುವುದು ಮೇಲು. ಆಹಾರ ಸೋಂಕಿನಿಂದ ಉದರ ಸಂಬಂಧಿ ವ್ಯಾಧಿ ಉಲ್ಬಣಿಸಲಿದೆ, ಇದನ್ನು ಅಲಕ್ಷಿಸಬೇಡಿ, ಸಾಂಪ್ರದಾಯಿಕ ಕೃಷಿ ಪದ್ಧತಿ ಲಾಭದಾಯಕವಾಗಲಿದೆ. ಮಡದಿ, ಮಕ್ಕಳು ನಿಮ್ಮ ಮೇಲೆ ಅತಿಯಾದ ಅಧಿಕಾರ ಚಲಾಯಿಸಲು ಯತ್ನಿಸುವರು. ಆಯವ್ಯಯಗಳು ಸರಿಸಮಾನ ವಾಗಿರಲಿದೆ. ವೃತ್ತಿಯಲ್ಲಿ ಅನೇಕ ಸಮಸ್ಯೆಗಳು ಎದುರಾಗಲಿವೆ, ಗಣಪತಿಯನ್ನು ಪೂಜಿಸಿ. ಗುರು-ಶುಕ್ರ -ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಎಲ್ಲರೂ ಅಚ್ಚರಿಪಡುವಂತೆ ನಿಮ್ಮ ನಡಾವಳಿಯಲ್ಲಿ ಸೌಮ್ಯ ಹಾಗು ವಿನಮ್ರತೆ ಕಾಣಲಿದೆ, ಮಕ್ಕಳಲ್ಲಿದ್ದ ಸೋಮಾರಿತನ ದೂರವಾಗಲಿದೆ, ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿ ಖರೀದಿಸಲು ಇದು ಸುಸಮಯವಾಗಿದೆ, ಶ್ರಮ ಜೀವಿಗಳ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಿದೆ, ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಸರ್ಕಾರದಿಂದ ಸವಲತ್ತು ಸಿಗಲಿದೆ, ಅತಿಯಾದ ಮೋಜು, ಮಸ್ತಿ ಅಥವಾ ಭೋಜನ ಕೂಟ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಸೋಮ-ಮಂಗಳ-ಬುಧ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ವಿಷಯಗಳನ್ನು ಗಂಭೀರವಾಗಿ ಚರ್ಚಿಸುವ ಮನೋಭಾವ ಬರಲಿದೆ, ಮಹಿಳೆಯರು ಆದಾಯಕ್ಕೆ ತಕ್ಕಂತೆ ಮನೆವಾರ್ತೆ ನಡೆಸುವುದು ಮೇಲು. ನ್ಯಾಯವಾದಿಗಳು ತಮ್ಮ ಕಕ್ಷಿದಾರರಿಗೆ ಜಯ ದೊರಕಿಸಿ ಕೊಡುವರು, ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ದೊರೆಯುವರು, ಅತಿಯಾದ ಸಾಲ ಶೂಲಕ್ಕೆ ಕಾರಣವಾಗದಂತೆ ಎಚ್ಚರವಹಿಸಿ. ಆಸ್ತಿ ವಿಚಾರದಲ್ಲಿ ಹಿರಿಯರ ಆಣತಿಯಂತೆ ನಡೆದುಕೊಳ್ಳುವುದರಲ್ಲೇ ನಿಮ್ಮ ಒಳಿತಡಗಿದೆ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಬದುಕಿನಲ್ಲಿ ಪ್ರಾಮಾಣಿಕತೆಯನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿ. ಇಲ್ಲವಾದಲ್ಲಿ ಅಪನಂಬಿಕೆಯ ಸರಪಳಿ ನಿಮ್ಮನ್ನು ಸುತ್ತಿಕೊಳ್ಳಬಹುದು, ಹಣಕಾಸಿನ ನಿರ್ವಹಣೆ ಉತ್ತಮವಾಗಿರಲಿದೆ, ರಾಜಕಾರಣಿಗಳಿಗೆ ಸಹವರ್ತಿ ಗಳಿಂದಲೇ ವಂಚನೆಯಾಗಬಹುದು, ಕೃಷಿಯಿಂದ ಉತ್ತಮ ಆದಾಯವಿದ್ದರೂ ಮಧ್ಯವರ್ತಿಗಳಿಂದ ಲಾಭಾಂಶದಲ್ಲಿ ಕಡಿತವಾಗದಂತೆ ಎಚ್ಚರ ವಹಿಸಿ, ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ಭಾನು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹದ್ದುಮೀರುತ್ತಿರುವ ಯುವಕರ ನಡಾವಳಿಯನ್ನು ಹಿರಿಯರು ತಿದ್ದಲು ಪ್ರಯತ್ನಿಸುವರು, ಮಿತಿಮೀರುತ್ತಿರುವ ಖರ್ಚು ಆದಾಯಕ್ಕೆ ಸರಿದೂಗದೇ ಕಂಗಾಲಾಗುವಿರಿ, ಸಿನಿಮಾ ಸಾಹಸ ಕಲಾವಿದರಿಗೆ ಹೆಚ್ಚಿನ ಆದಾಯವಾಗಲಿದೆ. ಹಲವು ಕಾರಣಗಳಿಂದ ಮುಖ ರೋಗವು ಬಾಧಿಸಲಿದೆ. ಸೂಕ್ತ ಚಿಕಿತ್ಸೆ ಪಡೆಯುವುದು ಮೇಲು, ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ಬರಲಿದೆ, ಸಾಧ್ಯವಿದ್ದಲ್ಲಿ ಬಡವರಿಗೆ ಅನ್ನದಾನ ಮಾಡಿ. ಸೋಮ-ಗುರು-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಚ.ಚಿ.)**

ನೀವಾಡಲಿರುವ ಮಾತು ಮತ್ತೊಬ್ಬರಿಗೆ ನೋವಾಗದಂತೆ ಎಚ್ಚರ ವಹಿಸಿ, ಮಂದಗತಿ ಆದಾಯ ಉಳಿತಾಯಕ್ಕೆ ಧಕ್ಕೆಯನ್ನುಂಟು ಮಾಡಲಿದೆ, ಮತ್ತೊಬ್ಬರ ವಿಚಾರದಲ್ಲಿ ನಿಮ್ಮ ಪ್ರವೇಶ ಅವಮಾನಕ್ಕೆ ಕಾರಣವಾಗಬಹುದು, ಉದ್ಯಮಿಗಳು ಕಾರ್ಮಿಕರೊಂದಿಗೆ ಸಹಕರಿಸಿಕೊಂಡು ಹೋಗುವುದು ಮೇಲು. ಮತ್ತೊಬ್ಬರಿಗೆ ಸಹಾಯವನ್ನು ಮಾಡುವ ಮೊದಲು ನಿಮ್ಮ ಇತಿಮಿತಿಯ ಅರಿವಿರಲಿ, ಸಾಧು ಸಂತರ ದರ್ಶನ ಭಾಗ್ಯಬರಲಿದೆ. ಭಾನು-ಬುಧ-ಗುರು-ಶುಭದಿನಗಳು.

**ವಿಶೇಷದಿನಗಳು :**
**ದಿನಾಂಕ: 13.6.2024 ನೇ ಗುರುವಾರ ಕೊಲ್ಲೂರು ಮೂಕಾಂಬಿಕಾ ಜಯಂತಿ.**

# ಡಾ. ಮಂಜುನಾಥ್ ಸಂಪುಟ ಸ್ಥಾನಕ್ಕಾಗಿ ಸುಧಾಮೂರ್ತಿ ಯತ್ನ

ಬೆಂಗಳೂರು, ಜೂ. 8 - ಲೋಕಸಭೆಗೆ ಆಯ್ಕೆಗೊಂಡಿರುವ ಡಾ.ಮಂಜುನಾಥ್ ಅವರಿಗೆ ಕೇಂದ್ರದಲ್ಲಿ ಮಂತ್ರಿ ಇಲ್ಲವೇ ಆರೋಗ್ಯ ಕ್ಷೇತ್ರದಲ್ಲಿ ಒಂದು ಉನ್ನತ ಹುದ್ದೆ ಕೊಡಿಸಲು ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಹಾಗೂ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಯತ್ನಿಸುತ್ತಿದ್ದಾರೆ.

ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಮಂಜುನಾಥ್ ಅವರು ಮಾಡಿರುವ ಸಾಧನೆ ಕೇವಲ ಆ ಸಂಸ್ಥೆಗೆ ಸೀಮಿತವಾಗದೆ, ಇಡೀ ರಾಷ್ಟ್ರಕ್ಕೆ ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆ ತರಲು ಅವರಿಗೆ ಒಂದು ಅವಕಾಶ ಮಾಡಿಕೊಡಿ ಎಂದವರು ಮನವಿ ಮಾಡಿಕೊಂಡಿದ್ದಾರೆ.

ತಮ್ಮ ಇತಿಮಿತಿಯಲ್ಲಿ ಮಂಜುನಾಥ್ ಅವರಿಗೆ ಹುದ್ದೆ ಕೊಡಿಸಲು ಸುಧಾಮೂರ್ತಿ ದೆಹಲಿ ಮಟ್ಟದಲ್ಲಿ ಲಾಬಿ ಮಾಡಿದ್ದಾರೆ.

ಕರ್ನಾಟಕದಿಂದ ಕುಮಾರಸ್ವಾಮಿ ಅವರಿಗೆ ನೀಡುತ್ತಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಮಂಜುನಾಥ್ ಅವರಿಗೆ ಮಂತ್ರಿ ಸ್ಥಾನ ದೊರೆಯುವ ಸಾಧ್ಯತೆಯೇ ಇಲ್ಲ. ಆದರೆ, ಮಂಜುನಾಥ್ ಅವರ ಸೇವೆಯನ್ನು ಕೇಂದ್ರಕ್ಕೆ ಬಳಸಿಕೊಳ್ಳಬೇಕೆಂಬ ಭಾವನೆ ನರೇಂದ್ರ ಮೋದಿ ಹಾಗೂ ಬಿಜೆಪಿ ಮುಖಂಡರಲ್ಲಿ ಇದೆ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಂಜುನಾಥ್ ಅವರನ್ನು ಬಳಸಿಕೊಳ್ಳುವ ಉದ್ದೇಶ ಮೋದಿ ಅವರಲ್ಲಿದೆ.




ಇದರೊಂದಿಗೆ ಸುಧಾಮೂರ್ತಿ ಅವರ ಪ್ರಯತ್ನವೂ ನಡೆದಿದೆ.

ಬಡವರು ಮತ್ತು ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಧಾಮೂರ್ತಿ ಅವರು ಮಂಜುನಾಥ್ ಜೊತೆ ಕೈಜೋಡಿಸಿ ಜಯದೇವ ಸಂಸ್ಥೆ ಆವರಣದಲ್ಲೇ ಇನ್ಫೋಸಿಸ್ ಫೌಂಡೇಷನ್ ತುರ್ತು ಚಿಕಿತ್ಸಾ ಘಟಕವನ್ನು ತನ್ನ ಸ್ವಂತ ವೆಚ್ಚದಲ್ಲಿ ಕಟ್ಟಿಸಿಕೊಟ್ಟಿದೆ.

ಅಷ್ಟೇ ಅಲ್ಲ, ಜಯದೇವ ಸಂಸ್ಥೆಯಲ್ಲಿ ಬಡವರ ಚಿಕಿತ್ಸೆಗಾಗಿ ಮೀಸಲಿರುವ ನಿಧಿಗೆ ಪರೋಕ್ಷವಾಗಿ ಸುಧಾಮೂರ್ತಿ ಅವರು ಆರ್ಥಿಕ ಸಹಾಯ ನೀಡುತ್ತಿದ್ದರು, ಇದರಿಂದ ಎಷ್ಟೋ ಮಂದಿ ಬಡವರಿಗೆ ವೈದ್ಯಕೀಯ ಸೌಲಭ್ಯ ದೊರೆತಿದೆ.

## ಇಂದು ನರೇಂದ್ರ ಮೋದಿ ಪ್ರಮಾಣ ವಚನ

ನವದೆಹಲಿ, ಜೂ. 8 – ನಿಯೋಜಿತ ಪ್ರದಾನ ಮಂತ್ರಿ ನರೇಂದ್ರ ಮೋದಿ ಅವರು ಭಾನುವಾರ ಸತತ ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ದೇಶದ ಪ್ರಥಮ ಪ್ರಧಾನಿ ಜವಾಹರ ಲಾಲ್ ನೆಹರು ನಂತರ ಇದೇ ಮೊದಲ ಬಾರಿಗೆ ಪ್ರಧಾನಿಯೊಬ್ಬರು ಎರಡೂ ಪೂರ್ಣಾವಧಿಯ ನಂತರ ಮೂರನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸುತ್ತಿದ್ದಾರೆ.



ನೂತನ ಎನ್.ಡಿ.ಎ. ಸರ್ಕಾರದಲ್ಲಿ ಸಚಿವ ಸ್ಥಾನ ಹಂಚಿಕೆಗಾಗಿ ಬಿಜೆಪಿ ನಾಯಕರು ಹಾಗೂ ಮಿತ್ರಪಕ್ಷಗಳ ನಡುವೆ ಚರ್ಚೆಗಳು ನಡೆಯುತ್ತಿವೆ. ಬಿಜೆಪಿ ನಾಯಕರಾದ ಅಮಿತ್ ಷಾ, ರಾಜನಾಥ್ ಸಿಂಗ್ ಮತ್ತಿತರರು ಚರ್ಚೆಯಲ್ಲಿ ಭಾಗಿಯಾಗಿದ್ದಾರೆ.

ಗೃಹ, ಹಣಕಾಸು, ರಕ್ಷಣೆ ಹಾಗೂ ವಿದೇಶಾಂಗ ವ್ಯವಹಾರಗಳ ಖಾತೆಗಳನ್ನು ಬಿಜೆಪಿ ಬಳಿ ಉಳಿಸಿಕೊಳ್ಳಬೇಕು ಎಂಬ ನಿಲುವೂ ಇದೆ. ಮಿತ್ರ ಪಕ್ಷಗಳಿಗೆ ಐದರಿಂದ ಎಂಟು ಸಂಪುಟ ಸ್ಥಾನಗಳು ಸಿಗುವ ಸಾಧ್ಯತೆ ಇದೆ.

ಅಮಿತ್ ಷಾ ಹಾಗೂ ಸಿಂಗ್ ಅವರು ನೂತನ ಸಂಪುಟದಲ್ಲಿರುವುದು ಖಚಿತವಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್, ಬಸವರಾಜ ಬೊಮ್ಮಾಯಿ, ಮನೋಹರಲಾಲ್ ಖಟ್ಟರ್ ಹಾಗೂ ಸರ್ಬಾನಂದ ಸೋನಾವಲ್ ಅವರೂ ಸಂಭವನೀಯರ ಪಟ್ಟಿಯಲ್ಲಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಆಗಿರುವ ಹಿನ್ನಡೆ ಹಾಗೂ ಮುಂಬರುವ ದಿನಗಳಲ್ಲಿ ವಿಧಾನಸಭೆಗಳಿಗೆ ನಡೆಯುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪುಟದಲ್ಲಿ ಸ್ಥಾನ ಹಂಚಿಕೆಯಾಗುವ ಸಾಧ್ಯತೆ ಇದೆ. ಬಿಜೆಪಿ ಸ್ವಂತ ಬಲದ ಮೇಲೆ ಪೂರ್ಣ ಬಹುಮತ ಪಡೆಯಲು ವಿಫಲವಾಗಿದೆ. ಇಷ್ಟಾದರೂ, ಸರ್ಕಾರದಲ್ಲಿ ನಿರಂತರತೆ ಇರಲಿದೆ ಎಂದು ಬಿಂಬಿಸಲು ಬಿಜೆಪಿ ಮುಂದಾಗಲಿದೆ.

# 'ಹಮಾರೆ ಬಾರಾ' ವಿವಾದಾತ್ಮಕ ಚಿತ್ರ ರದ್ದುಗೊಳಿಸಲು ಆಗ್ರಹ



**ಹರಿಹರ**

ಹರಿಹರ, ಜೂ.8- ನಗರದ ಅಂಜುಮಾನ್ ಎ ಇಸ್ಲಾಮಿಯ ಸಮಿತಿಯ ವತಿಯಿಂದ, 'ಹಮಾರೆ ಬಾರಹ' ಎಂಬ ವಿವಾದಾತ್ಮಕ ಸಿನಿಮಾ ಬ್ಯಾನ್ ಮಾಡುವಂತೆ ಆಗ್ರಹಿಸಿ ಗ್ರೇಡ್2 ತಹಶೀಲ್ದಾರ್ ಶಶಿಧರಯ್ಯ ಅವರಿಗೆ ಮನವಿ ಅರ್ಪಿಸಿದರು.

ಈ ವೇಳೆ ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಖಾಜಿ ಶಂಶುದ್ದೀನ್ ಸಾಬ್ ಬರಕಾತಿ ಮಾತನಾಡಿ, ಇತ್ತೀಚೆಗೆ ಝೀ ಸಿನಿಮಾ ವಾಹಿನಿಯಲ್ಲಿ ಹಮಾರೆ ಬಾರಹ್ ಎಂಬ ಚಲನಚಿತ್ರದ ಟ್ರೈಲರ್ ಬಿಡುಗಡೆ ಆಗಿದ್ದು, ಇದರಲ್ಲಿ ಇಸ್ಲಾಂ ಧರ್ಮದ ಬಗ್ಗೆ ಪ್ರಚೋದನಾತ್ಮಕವಾಗಿ ಮತ್ತು ಅವಹೇಳಕಾರಿಯಾಗಿ ಚಿತ್ರಿಸಲಾಗಿದೆ ಎಂದರು.

ಹಮಾರೆ ಬಾರಹ್ ಚಲನಚಿತ್ರ ಟ್ರೈಲರ್ ಅನ್ನು ಪರಿಶೀಲಿಸಿದಾಗ ಪವಿತ್ರ ಗ್ರಂಥ ಖುರಾನಿನಲ್ಲಿ ಇರುವ ಸೂರೆ ಎ. ಬಕರ ಸಾಲಿನ ಉಪದೇಶ ಮತ್ತು ಸಂದೇಶಗಳ ಕುರಿತಂತೆ ನಿರ್ಮಾಪಕರು ಮತ್ತು ನಿರ್ದೇಶಕರು ತಪ್ಪು ಅಪಾರ್ಥವಾಗುವ ರೀತಿಯಲ್ಲಿ ಸೃಷ್ಟಿಸಿ ಚಲನಚಿತ್ರವನ್ನು ಚಿತ್ರಿಸಿದ್ದಾರೆ. ಚಿತ್ರದಲ್ಲಿ ಅವಹೇಳನ ಮಾಡಿದ್ದಲ್ಲದೆ ಪ್ರಚೋದನಾತ್ಮಕವಾಗಿ ಚಿತ್ರಿಸಿದ್ದಾರೆ. ಹೆಚ್ಚಾಗಿ ಮಹಿಳೆಯರ ಬಗ್ಗೆ ಅವಹೇಳನ ಮಾಡಿದ್ದಲ್ಲದೆ ಅವರ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಬಿಂಬಿಸಿದ್ದಾರೆ.

ಈ ಸಂದರ್ಭದಲ್ಲಿ ಅಂಜುಮಾನ್ ಎ ಇಸ್ಲಾಮಿಯ ಸಂಸ್ಥೆಯ ಅಧ್ಯಕ್ಷ ಸೈಯದ್ ಏಜಾಜ್ ಆಹ್ಮದ್, ಕಾರ್ಯದರ್ಶಿ ಆಸೀಫ್ ಜುನೇದಿ, ಸಹ ಕಾರ್ಯದರ್ಶಿ ಎಸ್.ಎಂ. ಸಾಧಿಕ್ ಉಲ್ಲಾ , ಖಜಾಂಚಿ ಫಯಾಜ್ ಅಹ್ಮದ್, ಸದಸ್ಯರಾದ ಆರ್.ಸಿ. ಜಾವೇದ್, ರೋಷನ್ ಜಮೀರ್, ಬಶೀರ್ ಸಾಬ್ ದಾಸ್ತಾನಾ, ಸೈಯದ್ ರೆಮಾನ್, ರೆಹೆಮತ್ ಉಲ್ಲಾ, ನಜೀರ್ ಆಹ್ಮದ್, ಕೆ ಆಸೀಫ್ ಅಹ್ಮದ್, ನಜೀರ್ ಸಾಬ್, ದಾದಾಪೀರ್, ಮುಸ್ತಫಾ ಇತರರು ಹಾಜರಿದ್ದರು.

# ತೃಣಮೂಲ ಶಾಸಕನಿಂದ ರೆಸ್ಟೋರೆಂಟ್ ಮಾಲೀಕನ ಮೇಲೆ ಹಲ್ಲೆ

ಕೊಲ್ಕೊತಾ, ಜೂ. 8 – ನಟ ಹಾಗೂ ತೃಣಮೂಲ ಕಾಂಗ್ರೆಸ್ ಶಾಸಕ ಸೋಹಮ್ ಚಕ್ರವರ್ತಿ ಅವರು ರೆಸ್ಟೋರೆಂಟ್ ಮಾಲೀಕನ ಮೇಲೆ ಹಲ್ಲೆ ನಡೆಸಿ, ಅವರ ವಿರುದ್ಧ ಪೊಲೀಸರಲ್ಲಿ ದೂರು ದಾಖಲಿಸಿದ ಘಟನೆ ನಡೆದಿದೆ. ಈ ಘಟನೆಯ ವಿಡಿಯೋ ವೈರಲ್ ಆದ ನಂತರ, ಅವರು ಮಾಲೀಕನಲ್ಲಿ ಕ್ಷಮೆ ಯಾಚಿಸಿದ್ದಾರೆ.

ಚಕ್ರವರ್ತಿ ಹಾಗೂ ಅವರ ಸಹಚರರು ಪಶ್ಚಿಮ ಬಂಗಾಳದ ಕೊಲ್ಕೊತಾದ ನ್ಯೂ ಟೌನ್ ಬಳಿ ಇರುವ ರೆಸ್ಟೋರೆಂಟ್‌ಗೆ ತೆರಳಿದ್ದರು. ಈ ವೇಳೆ ವಾಗ್ವಾದ ನಡೆದು ಚಕ್ರವರ್ತಿ ಅವರು ಹೋಟೆಲ್ ಮಾಲೀಕ ಅನಿಸುಲ್ ಆಲಂ ಅವರ ಮೇಲೆ ಹಲ್ಲೆ ನಡೆಸಿದ್ದು ಸಿ.ಸಿ.ಟಿ.ವಿ. ದೃಶ್ಯಗಳಲ್ಲಿ ಕಂಡುಬಂದಿದೆ.

ಈ ಘಟನೆಯ ನಂತರ ಶಾಸಕ ಹಾಗೂ ರೆಸ್ಟೋರೆಂಟ್ ಮಾಲೀಕರಿಬ್ಬರೂ ಪೊಲೀಸರಲ್ಲಿ ಪರಸ್ಪರರ ವಿರುದ್ಧ ದೂರು ದಾಖಲಿಸಿದ್ದಾರೆ.

ಶನಿವಾರ ಸಂಜೆ ಉಚಿತವಾಗಿ ರೆಸ್ಟೋರೆಂಟ್ ಅನ್ನು ಚಿತ್ರೀಕರಣಕ್ಕಾಗಿ ಬಾಡಿಗೆಗೆ ನೀಡಲಾಗಿತ್ತು. ಕಾರ್ ಪಾರ್ಕಿಂಗ್ ಸ್ಥಳದಲ್ಲಿ ಬೇರೆಯವರಿಗೆ ಜಾಗ ಬಿಡುವಂತೆ ತಿಳಿಸಿದ್ದೆ. ಇದಕ್ಕಾಗಿ ಹಲ್ಲೆ ನಡೆಸಲಾಗಿದೆ ಎಂದು ಆಲಂ ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಚಕ್ರವರ್ತಿ, ನನ್ನ ಸಿಬ್ಬಂದಿ ಹಾಗೂ ತೃಣಮೂಲ ಕಾಂಗ್ರೆಸ್ ನಾಯಕ ಅಭಿಷೇಕ್ ಬ್ಯಾನರ್ಜಿಗೆ ರೆಸ್ಟೋರೆಂಟ್ ಮಾಲೀಕ ನಿಂದಿಸಿದ್ದರು. ಹೀಗಾಗಿ ತಾಳ್ಮೆ ಕಳೆದುಕೊಂಡು ಬಾರಿಸಿದ್ದೇನೆ. ನಾನು ತಾಳ್ಮೆ ಕಳೆದುಕೊಳ್ಳಬಾರದಿತ್ತು. ಈ ಬಗ್ಗೆ ಕ್ಷಮೆ ಯಾಚಿಸುತ್ತೇನೆ ಎಂದಿದ್ದಾರೆ.


# ಪತ್ರಿಕೆ, ಚಿತ್ರ ನಗರಿಯಿಂದ ಆಹಾರದವರೆಗೆ ರಾಮೋಜಿ ರಾವ್ ಸಾಧನೆಯ ಹಾದಿ

ಹೈದರಾಬಾದ್, ಮೇ 8 - ಪತ್ರಿಕೋದ್ಯಮ, ಚಲನಚಿತ್ರೋದ್ಯಮ ದಿಂದ ಹಿಡಿದು ಆಹಾರೋದ್ಯಮದವರೆಗೆ ಹಲವು ವಲಯಗಳಲ್ಲಿ ಸಾಧನೆ ಮಾಡಿದ್ದ ರಾಮೋಜಿ ರಾವ್ ಶನಿವಾರ ನಿಧನರಾಗಿದ್ದಾರೆ.

ಅತಿ ಹೆಚ್ಚು ಪ್ರಸಾರ ಹೊಂದಿರುವ ತೆಲುಗು ಪತ್ರಿಕೆ ಈನಾಡು ಸ್ಥಾಪಕರಾದ ರಾಮೋಜಿ ರಾವ್, ಸಾಮಾನ್ಯರಾಗಿ ಜನಿಸಿ, ಅಸಾಮಾನ್ಯ ಸಾಧನೆ ಮಾಡಿದ್ದಾರೆ.

ಈನಾಡು ದಿನಪತ್ರಿಕೆ, ಈನಾಡು ವಾಹಿನಿಗಳನ್ನು ಸ್ಥಾಪಿಸಿದ್ದ ಅವರು ವಿಶ್ವದ ಅತಿ ದೊಡ್ಡ ಚಲನಚಿತ್ರ ರಂಗವಾದ ರಾಮೋಜಿ ಫಿಲಂ ಸಿಟಿ ಮೂಲಕ ಹೆಸರು ಮಾಡಿದ್ದರು. ಡಾಲ್ಫಿನ್ ಹೋಟೆಲ್ ಸಮೂಹ, ಮಾರ್ಗದರ್ಶಿ ಚಿಟ್ ಫಂಡ್, ಉಷಾಕಿರಣ್ ಮೂವೀಸ್, ಪ್ರಿಯಾ ಫುಡ್ಸ್ ಮುಂತಾದ ಸಂಸ್ಥೆಗಳ ಮೂಲಕ ಲಕ್ಷಾಂತರ ಜನರಿಗೆ ಉದ್ಯೋಗ ಒದಗಿಸಿದ್ದರು.

ನವೆಂಬರ್ 16, 1936ರಲ್ಲಿ ಆಂಧ್ರ ಪ್ರದೇಶದ ಕರಾವಳಿ ಜಿಲ್ಲೆಯಾದ ಕೃಷ್ಣ ಜಿಲ್ಲೆಯಲ್ಲಿ ಅವರು ಜನಿಸಿದ್ದರು. 1962ರಲ್ಲಿ ಅವರು ಮಾರ್ಗದರ್ಶಿ ಚಿಟ್ ಫಂಡ್ ಸ್ಥಾಪಿಸಿದ್ದರು.



ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿದ್ದ ಅವರು, 1969ರಲ್ಲಿ ಅನ್ನದಾತ ನಿಯತಕಾಲಿಕ ಆರಂಭಿಸುವುದರೊಂದಿಗೆ ಮಾಧ್ಯಮ ವಲಯಕ್ಕೆ ಕಾಲಿರಿಸಿದ್ದರು.

1974ರಲ್ಲಿ ಅವರು ಈನಾಡು ಪತ್ರಿಕೆಯನ್ನು ವಿಶಾಖಪಟ್ಟಣದಲ್ಲಿ ಆರಂಭಿಸಿದ್ದರು. ಇದು ಅವಿಭಜಿತ ಆಂಧ್ರ ಪ್ರದೇಶದಲ್ಲಿ ಹೊಸ ಅಲೆಯನ್ನೇ ಆರಂಭಿಸಿತ್ತು. ಈನಾಡು ಹಲವು ಆವೃತ್ತಿಗಳೊಂದಿಗೆ ಅತಿ ಹೆಚ್ಚು ಪ್ರಸಾರ ಹೊಂದಿದ್ದ ದಿನಪತ್ರಿಕೆಯಾಗಿ ಬೆಳೆದಿತ್ತು.

ದೂರದರ್ಶನದ ಏಕಸ್ವಾಮ್ಯ ಇದ್ದ ಕಾಲದಲ್ಲಿ ಈ ಟಿವಿ ಮೊದಲ ಖಾಸಗಿ ಮನರಂಜನಾ ಸುದ್ದಿವಾಹಿನಿಯಾಗಿ ಆರಂಭವಾಗಿತ್ತು. ನಂತರ ಈಟಿವಿ ಸಾಕಷ್ಟು ಜನಪ್ರಿಯತೆ ಪಡೆದಿತ್ತು.

ರಾಮೋಜಿ ಫಿಲಂ ಸಿಟಿ ವಿಶ್ವದ ಅತಿ ದೊಡ್ಡ ಚಲನಚಿತ್ರ ನಗರಿ ಎಂಬ ಗಿನ್ನಿಸ್ ದಾಖಲೆಗೆ ಪಾತ್ರವಾಗಿದೆ. ಸಾವಿರಾರು ಚಿತ್ರಗಳು ಫಿಲಂ ಸಿಟಿಯಲ್ಲಿ ಚಿತ್ರೀಕರಣಗೊಳ್ಳುತ್ತಿವೆ.

ಪ್ರಿಯಾ ಫುಡ್ಸ್ ಕಂಪನಿಯಿಂದ ಉತ್ಪಾದನೆಯಾಗುವ ಪ್ರಿಯಾ ಬ್ರಾಂಡ್ ಉಪ್ಪಿನಕಾಯಿ ವಿಶ್ವದಾದ್ಯಂತ ಹೆಸರಾಗಿದೆ. 2016ರಲ್ಲಿ ರಾಮೋಜಿ ರಾವ್ ಅವರಿಗೆ ಎರಡನೇ ಅತಿ ದೊಡ್ಡ ನಾಗರಿಕ ಪ್ರಶಸ್ತಿಯಾದ ಪದ್ಮ ವಿಭೂಷಣ ಪ್ರದಾನ ಮಾಡಲಾಗಿತ್ತು.

# ನೀಟ್ ಪ್ರವೇಶ ಪರೀಕ್ಷೆ ಭ್ರಷ್ಟಾಚಾರ: ವಿದ್ಯಾರ್ಥಿ ಜೀವನದೊಂದಿಗೆ ಚೆಲ್ಲಾಟ ನಿಲ್ಲಿಸಿ!

ದಾವಣಗೆರೆ, ಜೂ. 8- ಜೂ. 4ರಂದು ಪ್ರಕಟಗೊಂಡ ನೀಟ್ ಪರೀಕ್ಷಾ ಫಲಿತಾಂಶದ ಪಾರದರ್ಶಕತೆಯ ಕುರಿತು ದೇಶವ್ಯಾಪಿ ವಿದ್ಯಾರ್ಥಿಗಳು ಹಾಗೂ ಪಾಲಕರು ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ.

ಯುಜಿಸಿ ಪರೀಕ್ಷಾ ಮಾರ್ಗಸೂಚಿ ಅನ್ವಯ ಅಂಕಗಳನ್ನು ನೀಡಿದ್ದಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾದ ಅಂಕಗಳೊಂದಿಗೆ, ಪ್ರಸ್ತುತ ಒಂದಿಷ್ಟು ವಿದ್ಯಾರ್ಥಿಗಳು ಪಡೆದಿರುವ ಅಂಕ ಗಳು ಹೊಂದಿಕೆಯಾಗುತ್ತಿಲ್ಲ. ಕೆಲವು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕ ನೀಡಿರುವುದಾಗಿ ಎನ್ ಟಿ ಎ ಸಮಜಾಯಿಸಿ ನೀಡಿದೆ ಎಂದು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆದರೆ ಹೇಳಿದ್ದಾರೆ.

ಹೆಚ್ಚುವರಿ ಶುಲ್ಕಗಳನ್ನು ನೀಡಿರುವ ಮಾನದಂಡವು ಸಂಪೂರ್ಣವಾಗಿ ಪಕ್ಷಪಾತಿಯಾಗಿದೆ. ಈ ವರ್ಷ ಪ್ರಕಟಿಸಲಾಗಿದ್ದ ಮಾರ್ಗಸೂಚಿ ಅನ್ವಯ ಹೆಚ್ಚುವರಿ ಅಂಕಗಳನ್ನು ನೀಡಲು ಅವಕಾಶವಿಲ್ಲ. ಆಶ್ಚರ್ಯಕರವೆಂಬಂತೆ, ಒಂದೇ ಕೇಂದ್ರದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ್ದಾರೆ. ಇದರೊಂದಿಗೆ, ಪರೀಕ್ಷೆಗೂ ಮುನ್ನವೇ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು ಅಥವಾ ಈ ಕುರಿತು ಸಮರ್ಪಕ ತನಿಖೆ ನಡೆಸಲಾಗಿಲ್ಲ ಎಂಬ ಆರೋಪವಿದೆ ಎಂದರು.

ಅನಿರೀಕ್ಷಿತ ಕೆಟ್ಟ ಫಲಿತಾಂಶದಿಂದಾಗಿ ಈಗಾಗಲೇ ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆಗೆ ತುತ್ತಾಗಿದ್ದಾರೆ. ಒಟ್ಟಾರೆಯಾಗಿ, ನೀಟ್ ಪರೀಕ್ಷಾ ಫಲಿತಾಂಶದಲ್ಲಿನ ಪಾರದರ್ಶಕತೆ ಕೊರತೆ ಮತ್ತು ಭ್ರಷ್ಟಾಚಾರದ ಕುರಿತು ಸಾಕಷ್ಟು ಆರೋಪಗಳು ಕೇಳಿ ಬಂದಿವೆ.

ಈ ಮುಂಚೆ, ರಾಜ್ಯಮಟ್ಟದಲ್ಲಿ ಜಂಟಿ ಪ್ರವೇಶ ಪರೀಕ್ಷೆಗಳು ಜಾರಿಯಲ್ಲಿದ್ದಾಗ, ಭ್ರಷ್ಟಾ ಚಾರದ ಕಾರಣ ಒಡ್ಡಿಯೇ ಅಖಿಲ ಭಾರತ ಮಟ್ಟದ ನೀಟ್ ಪರೀಕ್ಷೆಯನ್ನು ಪ್ರಾರಂಭಿಸ ಲಾಗಿತ್ತು. ಭ್ರಷ್ಟಾಚಾರದ ಕುರಿತು ತನಿಖೆ ನಡೆಸಿ ಸಂಬಂಧಪಟ್ಟವರಿಗೆ ಸೂಕ್ತ ಶಿಕ್ಷೆ ವಿಧಿಸುವುದರ ಬದಲಿಗೆ ಪರೀಕ್ಷಾ ಪದ್ಧತಿಯನ್ನು ಬದಲಾಯಿಸುವುದು ಪರಿಹಾರವಲ್ಲ ಎಂದು ನಾವು ಆ ಸಂದ ರ್ಭದಲ್ಲಿ ಎಚ್ಚರಿಕೆ ನೀಡಿದ್ದೆವು. ನಮ್ಮ ಎಚ್ಚರಿ ಕೆಯು ಇಂದು ನಿಜವಾಗಿದೆ ಎಂದು ತಿಳಿಸಿದರು.

ಸರ್ಕಾರದ ನಿಷ್ಕಾಳಜಿ ಮತ್ತು ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ವ್ಯಾಪಾರಿಕರಣ ದಿಂದಾಗಿ, ಇಡೀ ವೈದ್ಯಕೀಯ ಪ್ರವೇಶ ಪರೀಕ್ಷೆಯು ಕುಸಿತಕ್ಕೊಳಗಾಗುತ್ತಿದೆ. ಮತ್ತು ಅಮಾಯಕ ವಿದ್ಯಾರ್ಥಿಗಳು ಇದರ ಬಲಿಪಶುಗಳಾಗಿದ್ದಾರೆ.

ಈ ಹಿನ್ನೆಲೆಯಲ್ಲಿ, ಒಟ್ಟು ಪ್ರಕರಣದ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಮತ್ತು ಇದರಲ್ಲಿ ಭಾಗಿಯಾದ ಎಲ್ಲ ವ್ಯಕ್ತಿಗಳಿಗೂ ಕಠಿಣ ಶಿಕ್ಷೆ ವಿಧಿಸಬೇಕೆಂದು ಎಐಡಿಎಸ್‌ಓ ಸರ್ಕಾರ ವನ್ನು ಆಗ್ರಹಿಸುತ್ತದೆ ಎಂದು ಹೇಳಿದ್ದಾರೆ.

# ಮೊರಾರ್ಜಿ ವಸತಿ ಶಾಲೆಗಳಿಗೆ ಕೌನ್ಸಿಲಿಂಗ್

ದಾವಣಗೆರೆ, ಜೂ.8- ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ|| ಎ.ಪಿ. ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿರುತ್ತದೆ.

ಈ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ಶಾಲಾ ಆಯ್ಕೆಗಾಗಿ ಅಲ್ಪಸಂಖ್ಯಾತ ವರ್ಗದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳಿಗೆ ಇದೇ ದಿನಾಂಕ 12 ರಂದು ಬೆಳಿಗ್ಗೆ 10 ಗಂಟೆಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ದಿನಾಂಕ 13 ರಂದು ಬೆಳಿಗ್ಗೆ 10 ಗಂಟೆಗೆ ತುಂಗಭದ್ರಾ ಸಭಾಂಗಣ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಇಲ್ಲಿ ಕಡ್ಡಾಯವಾಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಬೇಕು. ಈ ದಿನಾಂಕಗಳಂದು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸದೇ ಇರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192 - 250022 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

# ಮುಂದಿನ ದಿನಗಳಲ್ಲಿ ಐ.ಎನ್.ಡಿ.ಐ.ಎ. ಸರ್ಕಾರ : ಮಮತಾ ಇಂಗಿತ

ಕೊಲ್ಕೊತಾ, ಜೂ. 8 – ಮುಂದಿನ ದಿನಗಳಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಕೇಂದ್ರದಲ್ಲಿ ಸರ್ಕಾರ ರಚಿಸಲು ಮುಂದಾಗಲಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಇಂಗಿತ ವ್ಯಕ್ತಪಡಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಮ್ಮ ಪಕ್ಷ ಕಾದು ನೋಡುವ ತಂತ್ರ ಅನುಸರಿಸಲಿದೆ. ದುರ್ಬಲ ಹಾಗೂ ಅಸ್ಥಿರ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರದಿಂದ ಹೊರ ಹೋದರೆ ತಮಗೆ ಸಮಾಧಾನವಾಗಲಿದೆ ಎಂದಿದ್ದಾರೆ.

ಬಿಜೆಪಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ಹಾಗೂ ಅಕ್ರಮವಾಗಿ ಸರ್ಕಾರ ರಚಿಸುತ್ತಿದೆ. ಇಂದು ಐ.ಎನ್.ಡಿ.ಐ.ಎ. ಮೈತ್ರಿಕೂಟ ಸರ್ಕಾರ ರಚಿಸಲು ಮುಂದಾಗದೇ ಇರಬಹುದು. ಆದರೆ, ನಾಳೆ ಅಧಿಕಾರ ರಚಿಸಲು ಮುಂದಾಗುವುದಿಲ್ಲ ಎಂದರ್ಥವಲ್ಲ. ಸ್ವಲ್ಪ ಕಾಲ ಕಾದು ನೋಡೋಣ ಎಂದಿದ್ದಾರೆ.

ಮುಂದಿನ ದಿನಗಳಲ್ಲಿ ಐ.ಎನ್.ಡಿ.ಐ.ಎ. ಮೈತ್ರಿಕೂಟ ಸರ್ಕಾರ ರಚಿಸಲಿದೆ. ಅಲ್ಲಿಯವರೆಗೆ ಬಿಜೆಪಿ ಸರ್ಕಾರ ಹೇಗೆ ನಡೆಸಲಿದೆ ಎಂಬುದನ್ನು ಕಾದು ನೋಡೋಣ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.


Arka Educational & Cultural Trust (Regd.)

**JAIN INSTITUTE OF TECHNOLOGY, DAVANGERE**

(A Unit of Jain Group of Institutions, Bengaluru) (NBA Accredited CSE, ECE, EEE)
(Approved by AICTE New Delhi and Affiliated to VTU, Belagavi)
Mob. : 99165 95656, e-mail : principal@jitd.in

**APPOINTMENT NOTIFICATION**

| Position | Department | Qual., Exp. & Salary |
|---|---|---|
| Professors<br>Associate Professors<br>Assistant Professors | * Computer Science & Engineering<br>* Information Science & Engineering<br>* Artificial Intelligence and Machine Learning<br>* Electronics & Communication Engineering<br>* Electrical & Electronics Engineering<br>* Civil Engineering<br>* Mechanical Engineering<br>* Physics * Chemistry<br>* Mathematics * MBA | As per AICTE norms |

**Non-Teaching :**
Office Staff (Tally) | Foremans | Programer | Instructors | Assistant Instructors | Helpers

Candidates may please send their Resume within 10 days to the following e-mail id : resume@jitd.in

Principal, Jain Institute of Technology
#323, Bada Cross, Near Veereshwara Punyashram, Avargere,
Davangere - 577 003 / e-mail : principal@jitd.in

**OM SAI HOME PRODUCTS**
ನಮ್ಮ ಮನೆಯಲ್ಲೇ ತಯಾರಿಸಿದ ಅನೇಕ ಮಸಾಲೆ ಪದಾರ್ಥಗಳು, ಸಾಂಬಾರ್ ಪುಡಿ, ಪುಳಿಯೋಗರೆ ಪುಡಿ, ಕಾರದಪುಡಿ, ಗರಮ್ ಇನ್ನು ಅನೇಕ ಪೌಡರ್‌ಗಳು ದೊರೆಯುತ್ತವೆ. ಬೇರೆ ಊರುಗಳಿಗೆಲ್ಲಾ ಕೋರಿಯರ್ ಮಾಡಲಾಗುತ್ತದೆ.
ಸಂಪರ್ಕಿಸಿ : 91102 74329

**FLAT FOR SALE**
ದಾವಣಗೆರೆ ವಿದ್ಯಾನಗರ ಕೊನೆ ಬಸ್ ಸ್ಟಾಪ್ ಬಳಿ
3BHK Semi furnished ಫ್ಲಾಟ್ ಮಾರಾಟಕ್ಕಿದೆ.
ಸಂಪರ್ಕಿಸಿ: 88614 11687

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

**Property Hub**
• EC
• E-swathu
• Building Licence
• Khatha Change
96118 66449

**ಶಿಕ್ಷಕಿಯರು ಬೇಕಾಗಿದ್ದಾರೆ**
B.Ed, D.Ed ಅಥವಾ ಯಾವುದೇ ಪದವಿ ಆಗಿರುವ ಶಿಕ್ಷಕಿಯರು ತಕ್ಷಣ ಬೇಕಾಗಿದ್ದಾರೆ. ಉಚಿತ ಬಸ್ ಸೌಲಭ್ಯವಿರುತ್ತದೆ.
ಆಸಕ್ತರು ಸಂಪರ್ಕಿಸಿ : CM ವಿಜಯಕುಮಾರ್ ಕಾರ್ಯದರ್ಶಿಗಳು, ಶ್ರೀ ಶ್ರೀನಿವಾಸ ವಿದ್ಯಾಸಂಸ್ಥೆ (ರಿ.) ಬಸಾಪುರ, ದಾವಣಗೆರೆ.
ಮೊ : 99453 24288

**ಮನೆ ಬಾಡಿಗೆಗಿದೆ**
2BHK ಸುಸಜ್ಜಿತ 1ನೇ ಮಹಡಿ ಮನೆ 12ನೇ ಕ್ರಾಸ್, 9ನೇ ಮೇನ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಕುಟುಂಬಸ್ಥರು ಹಾಗೂ ಸಸ್ಯಹಾರಿಗಳು ಮಾತ್ರ
79751 37289

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಶಿಲ್ಪಕಲಾ ಸಿಲ್ಕ್ ಸಾರೀಸ್
ಚಾಮರಾಜಪೇಟೆ, ದಾವಣಗೆರೆ
7892628916

**ಟ್ಯೂಷನ್**
8th, 9th, 10th
ಡೆಮೊಕ್ಲಾಸ್
ಉಚಿತ
90369 96243

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯಿತಿ ದರದಲ್ಲಿ ಮಾರಾಟಕ್ಕಿವೆ.
30×40, 30×50, 40×60
98441 24217
98458 61220

**ಸೈಟು ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್ ತುಂಗಭದ್ರಾ ಬಡಾವಣೆ 'ಡಿ' ಬ್ಲಾಕ್ ಪಾರ್ಕ್ ಹತ್ತಿರ (ಹೊಸ ಕೋರ್ಟ್ ಕಟ್ಟಡದ ಹತ್ತಿರ) 12mtrs x 12mtrs ಉತ್ತರಾಭಿಮುಖ ಇರುವ ಖಾಲಿ ನಿವೇಶನ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ : ಬ್ರೋಕರ್‌ಗಳಿಗೆ ಅವಕಾಶವಿಲ್ಲ
89710 60900


**ಮನೆ ಬಾಡಿಗೆಗೆ ಇದೆ**
ನೂತನವಾಗಿ ನಿರ್ಮಿಸಿರುವ ಮೊದಲನೇ ಮಹಡಿ 1 BHK ಮನೆ ಬಾಡಿಗೆಗೆ ಇದೆ. ಜೆ.ಹೆಚ್. ಪಟೇಲ್ ಬಡಾವಣೆ 'ಇ' ಬ್ಲಾಕ್, 3ನೇ ಮೇನ್, 2ನೇ ಕ್ರಾಸ್, ಶಾಮನೂರು.
70199 24038, 81478 38023

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್, 9ನೇ ಮೇನ್, 2ನೇ ಕ್ರಾಸ್‌ನಲ್ಲಿ ಫಸ್ಟ್ ಫ್ಲೋರ್‌ನಲ್ಲಿ ಮನೆ ಬಾಡಿಗೆಗೆ ಇದೆ.
99726 75765

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿಳಾಸ : ಸಪ್ತಗಿರಿ ಸ್ಕೂಲ್ ಹತ್ತಿರ ಕುಂದುವಾಡ ರೋಡ್. ಸಂಪರ್ಕಿಸಿ :
83103 14540

**ಮನೆ ಭೋಗ್ಯಕ್ಕೆ / ಲೀಸ್‌ಗೆ ಇದೆ**
2 BHK, 2 BHK
ರಾಜೀವ್‌ಗಾಂಧಿ ಬಡಾವಣೆ
99029 99615, 83106 11169

# ಈಶ್ವರಪ್ಪ ಎಂದಾಕ್ಷಣ ನೆನಪಾಗುವ ಆ ಘಟನೆಗಳು...



ಸುಮಾರು 40 ವರ್ಷಗಳ ಕೆಳಗೆ ಒಂದು ದಿನ ರಾತ್ರಿ ನಾನು ಸ್ಟುಡಿಯೋ ಕೆಲಸ ಗಳನ್ನು ಮುಗಿಸಿ ಚೌಕಿಪೇಟೆಯಿಂದ ಕೆ.ಬಿ ಬಡಾವಣೆಯ ನಮ್ಮ ಮನೆಗೆ ಬರುವಾಗ ಮನೆ ಬಳಿಯ ಒಂದು ಕಂಬಕ್ಕೆ ಯುವಕನೊಬ್ಬನನ್ನು ಕಟ್ಟಿಹಾಕಿದ್ದರು.ಸುಸ್ತಾಗಿ ತಲೆಬಗ್ಗಿಸಿಕೊಂಡಿದ್ದ. ಮನೆಗೆ ಬಂದು ತಾಯಿಯವರನ್ನು ಕೇಳಿದೆ, 'ಆ ಕಡೆ ಕನ್ಸರ್ವೆನ್ಸಿಯಲ್ಲಿ ಮನೆಯೊಂದರ ಬಚ್ಚಲಿನ ಕಿಟಕಿ ಮೂಲಕ ಸಾಯಂಕಾಲ ಇಣುಕಿ ನೋಡುತ್ತಿದ್ದನಂತೆ, ಹಿಡಿದು ತಂದು ಕಟ್ಟಿಹಾಕಿ ಬಡಿದರು, ಬಡಿದವರೆಲ್ಲಾ ಸುಸ್ತಾಗಿ ಮನೆಗೆ ಹೋದರು' ಎಂದರು.

ಕಟ್ಟಿ ಹಾಕಿದವರನ್ನು ಕರೆದ ನಾನು 'ಪೆಟ್ಟು ತಿಂದು ಆತಗೆ ತಪ್ಪಿನ ಅರಿವಾಗಿರಬಹುದು, ಬಿಟ್ಟುಬಿಡಬಹುದಲ್ಲ' ಎಂದೆ, ಕಟ್ಟು ಬಿಚ್ಚಿದರು. ಆತ ಕಾಲೆಳೆಯುತ್ತಾ ಅಶೋಕ ರಸ್ತೆ ಕಡೆ ಹೋದ. ತಾಯಿಯವರು ಹೇಳಿದರು, 'ಏನೇ ತಪ್ಪು ಮಾಡಿರಲಿ, ಪಾಪ, ರಾತ್ರಿ ಆಯ್ತು ಪೆಟ್ಟು ತಿಂದ ಜೀವ ಉಪವಾಸದಿಂದಲೂ ಸುಸ್ತಾಗಿರುತ್ತೆ, ಏನಾದರೂ ತಿನ್ನಲು ಕೊಡಬಹುದಿತ್ತು' ಎಂದರು. 'ಹಾಗಾದರೆ ಸ್ವಲ್ಪ ಅವಲಕ್ಕಿ ಕೊಡೋಣ' ಎಂದು ಕಾಗದ ಪೊಟ್ಟಣ ಮಾಡಿ ಹಾಕಿದೆ. 'ಒಣ ಅವಲಕ್ಕಿ ಹೇಗೆ ತಿನ್ತಾನೋ?' ಎಂದು ತಾಯಿಯವರು ತೆಂಗಿನಕಾಯಿ ತುರಿದು ಬೆಲ್ಲ ಹಾಕಿ ಅವಲಕ್ಕಿಯನ್ನು ಕಲಸಿ ಕೊಟ್ಟರು. ನಾನು ಪೊಟ್ಟಣ ಮಾಡಿಕೊಂಡು ಹೋಗುವಷ್ಟರಲ್ಲಿ ಆಗಲೇ ಎಲ್ಲೋ ಹೋಗಿದ್ದ.

ಸುಸ್ತಾದವನು ಇನ್ನೆಷ್ಟು ದೂರ ಹೋದಾನು, ಇಲ್ಲೇ ಎಲ್ಲಾದರೂ ಮಲಗಿರಬಹುದೆಂದು ಭಾವಿಸಿ, ಶಿವಯೋಗ ಮಂದಿರ ಆವರಣದಲ್ಲಿ ನೋಡಿದೆ ಕಾಣಲಿಲ್ಲ. ನಗರಸಭೆ ಆವರಣದ ಪಾರ್ಕಿನಲ್ಲಿ ನೋಡಿದೆ, ರೈಲ್ವೆ ನಿಲ್ದಾಣದ ಬೆಂಚುಗಳಲ್ಲಿ ನೋಡಿದೆ ಕಾಣಲಿಲ್ಲ. ಕೊನೆಯದಾಗಿ ಬಸ್‌ಸ್ಟ್ಯಾಂಡ್‌ನಲ್ಲಿ ನೋಡುವುದೆಂದು ಹೋದೆ. ಹಳೇ ಬಸ್ ಸ್ಟ್ಯಾಂಡಿನ ಹಳೆ ಕಟ್ಟಡ, ತಡರಾತ್ರಿ, ನಿರ್ಜನ, ಸ್ತ್ರೀ ಪುರುಷಭೇದವಿಲ್ಲದೇ ಅನೇಕರಲ್ಲಿ ಮಲಗಿದ್ದರು. ಆತ ಅಲ್ಲೇನಾದರೂ ಮಲಗಿರಬಹುದು ಎಂದು ನಾನು ಕೈಯಲ್ಲಿ ಅವಲಕ್ಕಿ ಪೊಟ್ಟಣ ಹಿಡಿದು ಮಲಗಿದ ಒಬ್ಬರನ್ನೇ ನೋಡುತ್ತಿದ್ದೆ. ಆಗ ಬೆಂಗಳೂರಿಗೆ ಹೋಗುವ ಬಸ್ ಸ್ಟ್ಯಾಂಡಿಗೆ ಬರುವ ಸಮಯ. ಬಹುಷಃ ಅದರ ಹೆಸರು ಕೊಹಿನೂರ್ ಎಕ್ಸ್‌ಪ್ರೆಸ್ ಅಂತ ಇರಬೇಕು. ಆ ಬಸ್ಸಿಗಾಗಿ ಒಬ್ಬೊಬ್ಬರೇ ಬರಲಾರಂಭಿಸಿದರು. ಬೆಂಗಳೂರಿಗೆ ಹೊರಟಿದ್ದ ಎಂ.ಜಿ.ಈಶ್ವರಪ್ಪನವರೂ ಬಂದರು. ಕೈಯಲ್ಲಿ ಪೊಟ್ಟಣ ಹಿಡಿದು, ಅರೆಗತ್ತಲೆಯಲ್ಲಿ ಮಲಗಿದವರನ್ನು ನೋಡುತ್ತಿದ್ದ ನನ್ನನ್ನು ಗಮನಿಸಿ, 'ರೀ ಮಂಜುನಾಥ್ ಸ್ವಲ್ಪ ಈ ಕಡೆ ಬರ್ರಿ' ಎಂದು ಕರೆದು 'ಏನಿದು ಈ ಹೊತ್ತಿನಲ್ಲಿ ಈ ಅವಸ್ಥೆ?!' ಎಂದರು. ನಾನು ಎಲ್ಲಾ ಹೇಳಿದೆ. ಹಣೆ ಬಡೆದುಕೊಂಡು ಒಮ್ಮೆ ಜೋರಾಗಿ ನಕ್ಕ ಈಶ್ವರಪ್ಪನವರು 'ರೀ ಮಂಜುನಾಥ್' ನಾನು ಕೇಳಿದ್ದರಿಂದ ಎಲ್ಲಾ ತಿಳೀತು, ಸುಮ್ಮನೆ ನೋಡಿದೋರು ಏನಂತ ತಿಳಿದಾರರು, ಇವೆಲ್ಲಾ ಸಿನಿಮಾದಲ್ಲಿ ಆಗುವಂತವು, ಸೀದಾ ಮನೆಗೆ ಹೋಗ್ರಿ ಮಕ್ಕಳ್ರಿ, ಅವಲಕ್ಕಿನ ನಾಳೆ ಬೆಳಿಗ್ಗೆ ನೀವು ನಿಮ್ಮಮ್ಮ ತಿಂಡಿ ತಿನ್ನುವಂತ್ರಿ' ಎಂದರು.

ಮನೆಗೆ ಬಂದೆ, ತಾಯಿಯವರಿಗೆ ಹೇಳಿದೆ. 'ಹೌದಪ್ಪಾ, ನಾವು ಒಂಥರಾ ಅಂದುಕೊಂಡು ಮಾಡ್ತೇವೆ, ನೋಡಿದೋರು ಇನ್ನೊಂದು ತರಾ ಅಂದುಕೊಳ್ಳಬಹುದು, ಈಶ್ವರಪ್ಪ ಹೇಳಿದ್ದೂ ಸರಿ, ಅವಲಕ್ಕಿ ಅಲ್ಲಿಟ್ಟು ಮಲಕ್ಕೋ, ಒಟ್ಟಾರೆ ಆ ಹುಡುಗನಿಗೆ ಪೆಟ್ಟು ತಿನ್ನೋ ಯೋಗ ಇತ್ತೇ ಹೊರತು ನಮ್ಮ ಅವಲಕ್ಕಿ ತಿನ್ನೋ ಯೋಗ ಇಲ್ಲ" ಎಂದರು.

## 'ಸದಭಿರುಚಿಯ ಹಾಸ್ಯವೆಂದರೆ'

ಸುಮಾರು 30 ವರ್ಷಗಳ ಹಿಂದೆ ದಿ. ಶ್ರೀಮತಿ ನಾಗಮ್ಮ ಕೇಶವಮೂರ್ತಿ ಮುಂತಾದವರು ಸೇರಿ ಸದಭಿರುಚಿಯ ಹಾಸ್ಯವನ್ನು ಜನರಿಗೆ ಉಚಿತವಾಗಿ ಒದಗಿಸಬೇಕೆನ್ನುವ ಉದ್ದೇಶದಿಂದ 'ಹ್ಯೂಮರ್ ಕ್ಲಬ್' ಸ್ಥಾಪಿಸಲಾಗಿತ್ತು.

ಹೊರಗಿನ ಹಾಸ್ಯ ಪ್ರಸ್ತುತಿಗಾರರಿಗೆ ಅವಕಾಶಕೊಟ್ಟಂತೆಯೇ ಸ್ಥಳೀಯರಿಗೂ ಅವಕಾಶ ಕೊಡಲಾಗುತ್ತಿತ್ತು. ಅನೇಕ ಬಾರಿ ಜನಪ್ರಿಯ ಹಾಸ್ಯ ಪ್ರಸ್ತುತಿಗಾರರ ಕಾರ್ಯಕ್ರಮದಲ್ಲಿ ನಮಗೆ ಗುಣಮಟ್ಟದ ಹಾಸ್ಯ ಸಿಗುತ್ತಿರಲಿಲ್ಲ ಅಶ್ಲೀಲವೋ, ಅಸಂಬದ್ಧವೋ ಬರುತ್ತಿತ್ತು. ಸ್ಥಳೀಯರ ಪ್ರಸ್ತುತಿಗಳೇ ನಿಜವಾಗಿಯೂ ಗುಣಮಟ್ಟದ್ದಾಗಿರುತ್ತಿತ್ತು. ಹೀಗೆ ಒಮ್ಮೆ ಸ್ಥಳೀಯವಾಗಿ ಡಾ. ಎಂ.ಜಿ. ಈಶ್ವರಪ್ಪನವರನ್ನು ಕರೆಸಿದಾಗ ಅವರ ಪ್ರಸ್ತುತಿಯಲ್ಲಿ ಬಹುಷಃ ಪಂಪ ಭಾರತದ ಸನ್ನಿವೇಶವೋ ಅಥವಾ ಇವರದೇ ಸೃಷ್ಟಿಯೋ ಒಂದು ಘಟನೆ ಹೇಳಿದರು.

ಸಂಧಾನಕ್ಕಾಗಿ ಶ್ರೀ ಕೃಷ್ಣನು ಕೌರವರ ಬಳಿ ಹೋಗುವಾಗ ಪಾಂಡವರನ್ನು ಮಾತನಾಡಿಸಿ, ಔಪಚಾರಿಕವಾದ ಸಂದೇಶವೇನೆಂದು ಕೇಳಿದಾಗ ಧರ್ಮರಾಯನು ಭೀಷ್ಮ, ಧೃತರಾಷ್ಟ್ರ, ಗಾಂಧಾರಿ ವಿದುರಾದಿಗಳು ಕ್ಷೇಮವೇ ? ಎಂದು ತಾನು ಕೇಳಿರುವುದಾಗಿ ಹೇಳು ಎಂದು ಕೃಷ್ಣನಿಗೆ ಹೇಳಿದರೆ, ಅರ್ಜುನನು ಗುರು ದ್ರೋಣಾಚಾರ್ಯರು ಕ್ಷೇಮವೇ ಎಂದು ತಾನು ಕೇಳಿರುವುದಾಗಿ ಹೇಳು ಎಂದಿನಂತೆ. ಭೀಮನ ಸರದಿ ಬಂದಾಗ 'ದುರ್ಯೋಧನನ ತೊಡೆ ಕ್ಷೇಮವೇ?' ಎಂದು ತಾನು ಕೇಳಿರುವುದಾಗಿ ಹೇಳು ಎಂದನಂತೆ ಎಂದು ಈಶ್ವರಪ್ಪನವರು ಹೇಳಿದರು.

'ಸದಾಶಿವನಿಗೆ ಅದೇ ಧ್ಯಾನ' ಎಂಬುವಂತೆ ಭೀಮನಿಗೆ ದುರ್ಯೋಧನನ ತೊಡೆ ಬಡಿದು ಬಿಸುಟುವುದೇ ಚಿಂತೆ, ಧ್ಯಾನ. ಅಂತಹ ತೊಡೆಯು ಸೊರಗಿ ಕ್ಷೀಣವಾದರೆ, ಅದು ಭೀಮನ ಶೌರ್ಯ ಪರಾಕ್ರಮಕ್ಕೇ ಅಪಮಾನ. ಅದಕ್ಕಾಗಿ ದುರ್ಯೋಧನ ತನ್ನ ಆ ತೊಡೆಯನ್ನು ಅತ್ಯಂತ ದೃಷ್ಟಪುಷ್ಟವಾಗಿ ಇಟ್ಟು ಕೊಂಡಿರಬೇಕೆಂದು ಭೀಮನ ಇಂಗಿತವೆಂಬುದು ತಿಳಿಯುತ್ತಾದರೂ ಭೀಮನ ಈ ಮಾತು ಅದ್ಭುತ ವೀರ ರಸದಲ್ಲೂ ಅತ್ಯುತ್ತಮ ಹಾಸ್ಯರಸವನ್ನೂ ತರುತ್ತದೆ. ಇದು ಸದಭಿರುಚಿಯ ಹಾಸ್ಯ. ದುರ್ದೈವ ಅಂದು ಅನೇಕರಿಗೆ ಇದು ಅರ್ಥವಾಗಿರಲಿಲ್ಲ !!.

- ಎಚ್.ಬಿ.ಮಂಜುನಾಥ, ದಾವಣಗೆರೆ.

**ಇಂಡಸ್ಟ್ರಿ ಮಾರಾಟಕ್ಕೆ**
ಹನಗವಾಡಿ ಇಂಡಸ್ಟ್ರೀಯಲ್ ಏರಿಯಾದಲ್ಲಿ 110x100 ಅಳತೆಯ ಹೋಂ ಇಂಡಸ್ಟ್ರೀಸ್ 31x55 ಬೋರ್ ವೆಲ್ ಸೌಕರ್ಯವಿದೆ, 10HP ಕರೆಂಟ್ ಇರುವ RCC ಬಿಲ್ಡಿಂಗ್ ಮಾರಾಟಕ್ಕೆ ಇದೆ.
98445 46777

**ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ ಎಸ್‌ಪಿ ಆಫೀಸ್ ಎದುರು, 20x30 ದಕ್ಷಿಣ ದಿಕ್ಕಿನ ಸೈಟ್ 14 ಲಕ್ಷಕ್ಕೆ, ಯರಗುಂಟೆ ಗ್ರಾ.ಪಂ. ಡೋರ್ ನಂಬರ್, ಇ-ಸೊತ್ತು, ಖಾತೆ, ಇಸಿ ಎಲ್ಲಾ ದಾಖಲಾತಿಗಳು ಲಭ್ಯ, ಸೈಟ್ ರಿಜಿಸ್ಟ್ರೇಷನ್‌ಗೆ ರೆಡಿ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
76768 55957

**ಹೋಟೆಲ್ ಬಾಡಿಗೆಗಿದೆ**
15x90 ಅಳತೆಯ ಎಲ್ಲಾ ಸೌಕರ್ಯವುಳ್ಳ, ಬೋರ್ ವೆಲ್, ಮುನ್ಸಿಪಲ್ ನೀರಿನ ಸೌಲಭ್ಯ ಹಾಗೂ ಸಾಮಾನುಗಳ ಸಮೇತ ಬಾಡಿಗೆಗೆ ಇದೆ. (ಸಸ್ಯಹಾರಿ ಹಾಗೂ ಮಾಂಸಾಹಾರಿಗೆ ಅನುಕೂಲವಿದೆ)
93417 10083

**ಶಿಕ್ಷಕ / ಶಿಕ್ಷಕಿಯರು ಬೇಕಾಗಿದ್ದಾರೆ**
PCM - Maths - 1, B.Ed, Eng - 2, B.Ed, Kan - 1, B.Com, BCA - 1
ಎಸ್.ಎಂ.ಎಸ್. ಕಾನ್ವೆಂಟ್ ಹಾಗೂ ಪ್ರೌಢ ಶಾಲೆ ರಾಜೀವ್ ಗಾಂಧಿ ಬಡಾವಣೆ, ದಾವಣಗೆರೆ.
98447 35946, 96631 95531

**PG FOR LADIES / GIRLS**
P.J. Extension, Near to Bus Stop, Railway Station, Located at City Center Hot Water, Hygiene Food, Attached Bathrooms, Fan, Cupboard, CCTV Survelillance etc.
79753 18618, 79753 12143

**ಶಿಕ್ಷಕಿ ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, HKR ಸರ್ಕಲ್ ಹತ್ತಿರ, ನಿಟ್ಟುವಳ್ಳಿ, ದಾವಣಗೆರೆ.
1) DEd/ BCom/BSc/NTC:01
767-649-4295

**ಬೇಕಾಗಿದ್ದಾರೆ**
ಕಾರ್ ಮತ್ತು ಬೈಕ್ ವಾಟರ್ ವಾಶ್ ಮಾಡಲು ಹುಡುಗರು ಬೇಕಾಗಿದ್ದಾರೆ.
88673 22545
73491 94155
88673 22645

**ಬೇಕಾಗಿದ್ದಾರೆ**
ಸಿಲಿಂಡರ್ ಡೆಲಿವರಿ ಬಾಯ್ಸ್ ಕಂ ಆಟೋ ಡ್ರೈವರ್ ಬೇಕಾಗಿದ್ದಾರೆ. ಸಂಪರ್ಕಿಸಿ :
98441-14143

**ಪಿ.ಜಿ. ಖಾಲಿ ಇದೆ**
BIET ರೋಡ್, J.H. ಪಟೇಲ್ ಕಾಲೇಜ್ ಪಕ್ಕ, ದಾವಣಗೆರೆ. ಸಂಪರ್ಕಿಸಿ :
89704 49036

**WANTED**
Sales Boy 7,500 to 12,000
Skill Required, Computer Hardware & Networking
10.00 am to 8.30 pm
99027 65365

**HOUSE FOR RENT**
2 BHK house in Kottureshwara Badavane, (DCM Layout) in First floor, Bore & Muncipal water Also Solar facilities available
63610 34131

**BUILDING FOR RENT**
For Hotel College, PG, Gowdown or Any other Purpuses, Contact : DCM Town ships, Davanagere.
98444 99944

**ಬೇಕಾಗಿದ್ದಾರೆ**
ಪಿಯುಸಿ ಪಾಸ್ ಆದ 25 ವರ್ಷದೊಳಗಿನ ಯುವಕ/ಯುವತಿಯರು ದಾವಣಗೆರೆ ನ್ಯೂರೋಥೆರಪಿ ಕೇಂದ್ರದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಆಸಕ್ತರು ಇಂದೇ ಸಂಪರ್ಕಿಸಿ :
99726 00713

**ನಮ್ಮಲ್ಲಿ ಉತ್ತಮ ಅಡಿಕೆ ಸಸಿಗಳು ಸಿಗುತ್ತವೆ.**
ದೇವರ ಬೆಳಕೆರೆ. ಸಂಪರ್ಕಿಸಿ :
77952 48272
97318 46014

**ಶಿಕ್ಷಕಿಯರು ಬೇಕಾಗಿದ್ದಾರೆ**
(ಕಾಡಜ್ಜಿ)
Play Group, LKG
1 to 7th class
Quali : PUC, NTC, D.Ed, PE Master (Male)
99729 35569

**ಮಾರಾಟಕ್ಕಿದೆ**
ಶ್ಯಾವಿಗೆ ಮಿಷನ್ 7 1/2 H.P. (without) with ಮಿಕ್ಸಿಂಗ್ 2 HP ಉತ್ತಮ ಸ್ಥಿತಿಯಲ್ಲಿ ಇದ್ದು, ಮಾರಾಟಕ್ಕಿದೆ. ಸಂಪರ್ಕಿಸಿರಿ :
98440 89360

**ಸೈಟ್ ಮಾರಾಟಕ್ಕಿದೆ**
ಸೈಟ್ ನಂ. 1, ಪಶ್ಚಿಮ ಅಥವಾ ದಕ್ಷಿಣ ಪುನೀತ್‌ರಾಜ್‌ಕುಮಾರ್ ಬಡಾವಣೆ, ಸುಬ್ರಹ್ಮಣ್ಯ ನಗರ, ಸೈಟ್ ನಂ. 150, ದಕ್ಷಿಣ, ಲಕ್ಷ್ಮಿ ಲೇಔಟ್, ದಾವಣಗೆರೆ.
86603 33012, 91082 55431

**TO LET - RENT ONLY**
2 BHK - North facing, Second floor. Swami Vivekananda Badavane,7th Main,Davangere. Western & Indian toilet.
Rent Only, No lease.Ready to move.
94482 01483

**ಕೆಲಸಕ್ಕೆ ಬೇಕಾಗಿದ್ದಾರೆ**
ಡೆಕೋರೇಷನ್ ಷೋರೂಂನಲ್ಲಿ ಸೇಲ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಷೋ ರೂಂ ಹೆಸರು : ಸೆಲಬ್ರೇಷನ್ಸ್
ಚರ್ಚ್ ರೋಡ್, ದಾವಣಗೆರೆ.
ಫೋ. : 85535 50436

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
81500 57888

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಆಟೋ ಮೊಬೈಲ್ ಶಾಪ್‌ನಲ್ಲಿ ಸಂಪರ್ಕಿಸಿ :
99643 28085
96631 38085

**ಬೇಕಾಗಿದ್ದಾರೆ**
ನಿಟುವಳ್ಳಿ ಹೊಸ ಬಡಾವಣೆ, ವಸತಿ ಗೃಹದಲ್ಲಿ ಸಸ್ಯ ಆಹಾರ ಮತ್ತು ಮಾಂಸ ಆಹಾರ ತಯಾರಿಸಲು ನುರಿತ ಗೃಹಿಣಿ ಬೇಕಾಗಿದ್ದಾರೆ.
ಎಸ್.ಕೆ. ದೇವೇಂದ್ರಪ್ಪ
99806 32046
08192 260330

**2 ಎಕರೆ 10 ಗುಂಟೆ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 15 ಕಿ.ಮೀ. (ಬನ್ನಿಕೋಡು) 65 ಲಕ್ಷ (ಎಕರೆ)
95353 01995

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 19.07.2024 ರಿಂದ 26.07.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಗಯಾ, ಬುದ್ಧಗಯಾ ಪ್ರವಾಸಕ್ಕೆ ಕೇವಲ 15 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473

**REQUIRED TEACHERS**
for Montessori school, (LKG, UKG), Primary & Higher Primary School (1std to 7th Std), qualified Any Degree with D.Ed or TCH & Good Technical with Communication Skill with Fluency English ( Preferred Ladies & gents as per age 22-42 years experience & as per age 0-5 years) Contact:
Jnana Naivedya Convent, Davangere.
99015 18252

**ಮಾರಾಟಕ್ಕಿವೆ**
3 Ft x 5ft, BT ಮರದ ಡೈನಿಂಗ್ ಟೇಬಲ್ ಬಿಟ 6 ಛೇರ್‌ಗಳು, ಕಬ್ಬಿಣದ ಮಂಚ, 46x72, 4ft x 6f+ Heavy Gage, Smal Safe lock Philips Portable Colour TV, good Condition
9448667001, 9442407996

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
94486 68077
ರಾಜ್ ಹಂಸ್ ಕಲೆಕ್ಷನ್
ಚಾಮರಾಜಪೇಟೆ, ದಾವಣಗೆರೆ.

**ರಕ್ತ ಪರೀಕ್ಷೆ**
ನಿಮ್ಮ ಮನೆಗೇ ಬಂದು ಎಲ್ಲಾ ವಿಧದ ರಕ್ತ ಪರೀಕ್ಷೆಯ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಪೆಥಾಲಜಿಸ್ಟ್ ಡಾಕ್ಟರ್ ಹೊಂದಿರುವ ಪ್ರತಿಷ್ಠಿತ ಲ್ಯಾಬ್‌ಗಳಲ್ಲಿ ಪರೀಕ್ಷಿಸಿ, ರಿಪೋರ್ಟ್‌ಗಳನ್ನು ನಿಮ್ಮ ಮನೆಗೆ ತಲುಪಿಸಲಾಗುತ್ತಿದೆ.
ಪ್ರಕಾಶ್, ಲ್ಯಾಬ್ ಟೆಕ್ನೀಷಿಯನ್
95358 12428

**ಮನೆ ಬಾಡಿಗೆಗೆ ಇದೆ**
ನಂ. 4275/366, 4ನೇ ಮುಖ್ಯರಸ್ತೆ, 10A ಅಡ್ಡ ರಸ್ತೆ, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಬೋರ್ ಹಾಗೂ ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ ಮೊದಲನೇ ಮಹಡಿಯ ಒಂದು ಬೆಡ್ ರೂಮ್‌ನ ಮನೆ ಬಾಡಿಗೆಗೆ ಇದೆ.
98442 01186, 98804 93817

**ಬೇಕಾಗಿದ್ದಾರೆ**
ಬಿ.ಎಸ್ಸಿ, ಬಿ.ಇಡಿ (PCM) - 2 ಮಹಿಳೆಯರಿಗೆ ಆದ್ಯತೆ, ಸಂಪರ್ಕಿಸಿ:
ಮಾನಸ ಗಂಗೋತ್ರಿ ಆಂಗ್ಲ ಮಾಧ್ಯಮ ಹೈಯರ್ ಪ್ರೈಮರಿ ಸ್ಕೂಲ್, ಮಾಯಕೊಂಡ
99017-68096, 89717-04280

**ಮನೆ ಮಾರಾಟಕ್ಕಿದೆ**
ಉತ್ತರ ದಿಕ್ಕಿನ, 15x45 ಅಳತೆಯ, ನೆಲಮಹಡಿ ಹಾಗೂ 1ನೇ ಮಹಡಿಯಲ್ಲಿರುವ ಮನೆ, 1ನೇ ಮೇನ್, 10ನೇ ಕ್ರಾಸ್, ಕೆ.ಬಿ. ಬಡಾವಣೆಯಲ್ಲಿ ಮಾರಾಟಕ್ಕಿದೆ.
99028 15559, 88616 14811

**WANTED**
• Salesman
• ITI Fitter
attractive salary with PF and ESI
Ambika Furniture,
843, Ashoka Road, Davanagere-577002
88844 88092, 99167 93795

**WANTED TEACHERS**
B.Sc, B.Com, M.Sc, Diploma candidates with good english to teach in Davanagere Schools. Contact :
98448 35527

**ಬೇಕಾಗಿದ್ದಾರೆ**
ತರುಣ್ ಎಂಟರ್ ಪ್ರೈಸಸ್
ದ್ವಿಚಕ್ರ ವಾಹನಗಳ ಸೀಟ್ ಕವರ್ ಅಂಗಡಿಯಲ್ಲಿ ಹೆಲ್ಪರ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
98441 90232

**(KHB) ಮನೆ ಮಾರಾಟಕ್ಕೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30 x 40 North Facing
ಸಂಪರ್ಕಿಸಿ:
97420 02204
96635 08213

**TEACHERS WANTED**
Science - 2 Posts
English - 2 Posts
Hindi - 2 Posts
Contact : SRIS, Gutturu, Harihara, Mob :
98444 99944

**ಅಡುಗೆ : ಮಹಿಳೆ ಬೇಕು**
ಪ್ರತಿದಿನ ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ಮನೆಯಲ್ಲಿ ಸಸ್ಯಹಾರಿ ಅಡುಗೆ ಮತ್ತು ಇತರೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98442-94446

**ಲೇಡಿ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
ಶ್ರೀ ಧರ್ಮಸ್ಥಳ ಇಂಡಿಯನ್ ಗ್ಯಾಸ್ ಏಜೆನ್ಸಿ, #784/13, ಎಸ್.ಎಸ್. ಹಾಸ್ಪಿಟಲ್ ರಸ್ತೆ, ಕಾಳಿದಾಸ ಸರ್ಕಲ್ ಎದುರು, ಜಯನಗರ, ಸರಸ್ವತಿ ಬಡಾವಣೆ, ದಾವಣಗೆರೆ.
94481 66175, 08192 226175

**ವಾಣಿಜ್ಯ ಸೈಟು ಮಾರಾಟಕ್ಕಿದೆ**
ಅಳತೆ : 60x20 (ಪಶ್ಚಿಮ ದಿಕ್ಕು)
ಶಂಕರ್ ವಿಹಾರ್ ಲೇಔಟ್, ದಾವಣಗೆರೆ. ಸಂಪರ್ಕಿಸಿ.
SK REAL ESTATE
DAVANAGERE
Amjad Khan.K :
97430 93568

**ಸರ್ಕಾರಿ ನೌಕರಿಯಲ್ಲಿರುವ**
ನೌಕರರಿಗೆ ಶೇಕಡಾ 2%ರಂತೆ 3 ಲಕ್ಷ ಹಣ ಬೇಕಾಗಿರುತ್ತದೆ. ಹಣ ಕೊಡುವವರು ಸಂಪರ್ಕಿಸಿ. ಭದ್ರತೆಗಾಗಿ ಬಾಂಡ್ ಪೇಪರ್, ಚೆಕ್ ನೀಡಲಾಗುತ್ತಿದೆ.
9591820888

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
70195 12416

**ಮನೆ ಮಾರಾಟಕ್ಕಿದೆ**
1828/A25,ಆಂಜನೇಯ ಬಡಾವಣೆ,18ನೇ ಕ್ರಾಸ್ ನಲ್ಲಿರುವ ಡುಪ್ಲೆಕ್ಸ್ (North Face), 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ (East Face) ವಾಸ್ತು ಪ್ರಕಾರ ಎಲ್ಲಾ ಅನುಕೂಲವಿರುವ fully furnished, ಬೋರ್ ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆ ಇರುವ ಮನೆ ಮಾರಾಟಕ್ಕೆ ಇದೆ.
9008432505/9449805750

**ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆ, ಎಲೆಬೇತೂರು**
ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
B.Sc., B.Ed. 01. ಪ್ರಾಥಮಿಕ ಶಾಲಾ ವಿಭಾಗಕ್ಕೆ
B.A., B.Ed (English) 01 ಪ್ರೌಢಶಾಲಾ ವಿಭಾಗಕ್ಕೆ
82771 70966
91648 67594

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**WANTED TEACHERS**
(English medium school)
B.A B.Ed.-01
(Social-english medium)
* B.Sc B.Ed -01(PCM) Mathematics.
* CPEd/BPEd-01
*Spoken English Teacher-01
Jnanabharathi vidyalaya
60 feet road, Niittuvalli. Davangere
9008735218, 9900357915

**ವಿಲ್ಲಾ ಸೈಟ್/ಫಾರ್ಮ್ ಹೌಸ್ ಲ್ಯಾಂಡ್ ಮಾರಾಟಕ್ಕಿದೆ**
ದಾವಣಗೆರೆ ಸಿಟಿಗೆ ಸೇರ್ಪಡೆಯಾಗಿರುವ, ಶಿರಮಗೊಂಡನಹಳ್ಳಿಯಲ್ಲಿ 60x140 ಅಡಿ ಅಳತೆಯ 2 ಸೈಟುಗಳು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
9900256739, 8867769919

**ರೈತ ಬಾಂಧವರೇ**
ಅಡಿಕೆ ತೋಟದ ಕಳೆಗೆ ಸ್ಪ್ರೇ ಮಾಡುವ ಸಾವಯವ ಕಳೆನಾಶಕ ದೊರೆಯುತ್ತದೆ.
ಫೋ. : 98451 04109

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ಶಿಕ್ಷಕಿಯರು ಬೇಕಾಗಿದ್ದಾರೆ**
ಅನುಭವವುಳ್ಳ ಶಿಕ್ಷಕಿಯರು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
Smart Kids Public School. Contact :
81977 50922
89703 66639

**ಸ್ಪೋಕನ್ ಇಂಗ್ಲಿಷ್ & ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಕಲಿಯಿರಿ
ವಿಕಾಸ್ ಅಕಾಡೆಮಿ, ದಾವಣಗೆರೆ.
ಸಂಪರ್ಕಿಸಿ :
93802 29199

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94814 17793

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಮನೆ ಬಾಡಿಗೆಗೆ ಇದೆ**
ನಗರದ ಶಾಮನೂರು ರಸ್ತೆ ಎಸ್.ಎಸ್. ಮಾಲ್ ಎದುರುಗಡೆ ಕುವೆಂಪು ನಗರ ಎಂ.ಸಿ.ಸಿ 'ಬಿ' ಬ್ಲಾಕ್, ಡೋರ್ ನಂ. 3993/43 ಮೊದಲನೇ ಮಹಡಿ ವಿಳಾಸದಲ್ಲಿ ಮೂರು ಬೆಡ್ ರೂಮ್, ಕಾರ್ಪೊರೇಷನ್ ವಾಟರ್, ಬೋರ್ ವಾಟರ್, ಸೋಲಾರ್ ನೀರು ಇರುವ ಮನೆ ಬಾಡಿಗೆಗೆ ಇದೆ. ಆಸಕ್ತರು ಈ ಕೆಳಕಂಡ ಫೋನ್ ನಂಬರ್‌ಗಳಿಗೆ ನೇರವಾಗಿ ಸಂಪರ್ಕಿಸಲು ಕೋರಿದೆ. (ಬ್ರೋಕರ್‌ಗಳಿಗೆ ಅವಕಾಶವಿರುವುದಿಲ್ಲ)
95915 47906
94495 25493

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ 30x50, (2400 sqft) ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**INCOME - TAX GST**
91138 44869

**ಬಾಡಿಗೆಗೆ**
ರೆಡಿ ಡಾಬಾ
ಸಂಪರ್ಕಿಸಿ :
90080 60660

**ಜೀವನ ಸಂಗಾತಿ ಬೇಕಾಗಿದ್ದಾರೆ**
ಉದ್ಯೋಗಸ್ಥ ವರನಿಗೆ 33 ವರ್ಷದೊಳಗಿನ ಯಾವುದೇ ಜಾತಿಯ ಸಂಗಾತಿ ಬೇಕಾಗಿದ್ದಾರೆ 2ನೆಯ ಮದುವೆಗೂ ಆದ್ಯತೆ ಇದೆ
76767 50280

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆ ಬಿ ಬ್ಲಾಕ್‌ನಲ್ಲಿ 30×50 ಪೂರ್ವ, 30×40 ಪೂರ್ವ, ಬೈಪಾಸ್ ಸರ್ವೀಸ್ ರಸ್ತೆಗೆ 30×55 ದಕ್ಷಿಣ (ಕಮರ್ಷಿಯಲ್) ವಿನಾಯಕ ಬಡಾವಣೆಯಲ್ಲಿ 30×50 ಪೂರ್ವ, ದಕ್ಷಿಣ ಕಾರ್ನರ್ ಸೈಟುಗಳು ಮಾರಾಟಕ್ಕೆ ಇವೆ. ಹೊಸ ಕುಂದುವಾಡದಲ್ಲಿ ರೋಹನ್ ಗಾರ್ಡನ್‌ನಲ್ಲಿ 3 ಸೈಟ್ ಉತ್ತರ 30×5 ಸೈಟುಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ (ಪ್ರಾಪರ್ಟಿ ಅಡ್ವೈಸರ್) ಸುರೇಶ್ ಆರ್.ಎಸ್. ಶಾಮನೂರು
ಮೊ. : 8431400907

**ಸೈಟುಗಳು ದೊರೆಯುತ್ತವೆ**
ಹರಿಹರದ ಸಂತ ಅಲೋಷಿಯಸ್ ಕಾಲೇಜ್, ಅಮರಾವತಿ ಬಡಾವಣೆ ಹತ್ತಿರ ದೂಡಾ ಅನುಮೋದನೆ ಬ್ಯಾಂಕ್ ಸಾಲ ಸೌಲಭ್ಯವಿರುವ ಸುಲಭ ಮೂರು ಕಂತುಗಳಲ್ಲಿ ಸೈಟುಗಳು ದೊರೆಯುತ್ತವೆ.
1100 ರೂ. (sqft)
90361 89699, 7259269940

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ನೇತ್ರದಾನ ಶ್ರೇಷ್ಠದಾನ**

**BUILT TO SUIT**
3600 Sft Open site North- East- West Corner suitable for Day- care, Pre-School, LKG, UKG available at SS Layout, 'B' Block, 4th Main, 9th Cross, Jain Trinity College Road, Davanagere-577006
will be built to suit. Offers invited:
RAVINDRA
98440 74721/ 91089 28988.

**GODOWN / WAREHOUSE FOR RENT**
4000 sqft, Newly Built, APMC 'A' Block, Davanagere.
Contact :
80501 25255

**WANTED TEACHERS**
B.Sc, B.E or Any Degree
Tatva school
Davangere
99641 10736

**ಬೇಕಾಗಿದ್ದಾರೆ**
ಕ್ರೆಡಿಟ್ ಕೋ-ಆಪ್ ಸೊಸೈಟಿಯಲ್ಲಿ ಸಹಾಯಕ ಹುದ್ದೆಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ವಿದ್ಯಾರ್ಹತೆ : ಬಿ.ಕಾಂ. ಅಥವಾ ತತ್ಸಮಾನ ಪದವಿ ಪಡೆದಿರಬೇಕು.
95908 07050

**HOUSE FOR RENT OR LEASE**
3 BHK, First floor, Near Canara Bank, K.B.Extn, Davangere.
(For vegetarians only)
Please contact:
8867476070,9480176324

**WANTED**
Tally Experienced lady Accountant / Receptionist wanted with good salary. ITI / Diploma electrical candidates & 10th / PUC office boy wanted
98867 09334, 99646 40494

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**TO - LET**
Furnished Flat for Sale and lease
2 BHK, Sqft : 1325
3 BHK, Sqft : 1888
Vidyanagar Last City Bus Stop
AM Apartment
Nainika Prime Rose
89519 38228, 91486 79995

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITION AVAILABLE FOR STATE & CBSE**
For Class 8th to 12th Maths & Science, Kannada
Contacts :
90351 06163, 97387 65628

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

# ನಗರದಲ್ಲಿ ಇಂದು ಸ್ವಕುಳಸಾಳಿ ಸಮಾಜದ ರಾಜ್ಯಮಟ್ಟದ ಸಭೆ

ಅತಿ ಹಿಂದುಳಿದ ಸಮಾಜಗಳಲ್ಲೊಂದಾದ ಮೂಲತಃ ನೇಕಾರಿಕೆ ಕಸುಬು ಹೊಂದಿರುವ ಸ್ವಕುಳಸಾಳಿ ಸಮಾಜದ ರಾಜ್ಯಮಟ್ಟದ ಕಾರ್ಯಕಾರಿ ಸಮಿತಿ ಸಭೆಯು ಇಂದು ನಗರದಲ್ಲಿ ಆಯೋಜನೆಗೊಂಡಿದೆ.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸ್ವಕುಳಸಾಳಿ ಶಿಕ್ಷಣ ಸಂಸ್ಥೆಯ 2023-24ನೇ ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭೆಯೂ ಏರ್ಪಾಡಾಗಿದೆ.

ಜೊತೆಗೆ, ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ 2023-24ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳನ್ನು ಪಡೆದಿರುವ ಸ್ವಕುಳಸಾಳಿ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡುವ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭವೂ ನಡೆಯಲಿದೆ.



ಸ್ವಕುಳಸಾಳಿ ಸಮಾಜದ ರಾಜ್ಯ ಮಟ್ಟದ ಕಾರ್ಯಕ್ರಮವೊಂದು ದಾವಣಗೆರೆಯಲ್ಲಿ ಇದೇ ಪ್ರಪ್ರಥಮ ಬಾರಿಗೆ ಜರುಗಲಿದ್ದು, ಇದರ ಆತಿಥ್ಯವನ್ನು ಸ್ವಕುಳಸಾಳಿ ಸಮಾಜದ ದಾವಣಗೆರೆ ಘಟಕ ವಹಿಸಿಕೊಂಡಿದೆ.

ಇಂದು ಬೆಳಿಗ್ಗೆ 10.30ಕ್ಕೆ ಶ್ರೀ ವೀರ ಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್)ದ ಬಳಿ ಇರುವ ಶ್ರೀ ಜಿಹ್ವೇಶ್ವರ ಧ್ಯಾನ ಮಂದಿರದಲ್ಲಿ ಏರ್ಪಾಡಾಗಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿಗಳೂ ಆಗಿರುವ ಕರ್ನಾಟಕ ರಾಜ್ಯ ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಚಂದ್ರಕಾಂತ ಎನ್. ಭಂಡಾರೆ ವಹಿಸಲಿದ್ದಾರೆ.

ಮಹಾನಗರ ಪಾಲಿಕೆ ಮಹಾಪೌರ ರಾದ ವಿನಾಯಕ ಪೈಲ್ವಾನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಅಖಿಲ ಭಾರತ ಸ್ವಕುಳಸಾಳಿ ಸಮಾಜದ ಅಧ್ಯಕ್ಷ ರಮೇಶ್ ಚಿಲ್ಲಾಳ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ರಾಜ್ಯದ ವಿವಿಧ ಭಾಗಗಳಿಂದ ಸ್ವಕುಳಸಾಳಿ ಸಮಾಜದ ಹಿರಿಯರು, ರಾಜ್ಯ ಪದಾಧಿಕಾರಿಗಳು, ಪ್ರತಿಭಾವಂತ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ದಾವಣಗೆರೆ ಸ್ವಕುಳಸಾಳಿ ಸಮಾಜದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಸಮಾಜದ ಗುರುಪೀಠ ಸ್ಥಾಪನಾ ಸಮಿತಿ ಅಧ್ಯಕ್ಷ ಧರ್ಮರಾಜ ಏಕಬೋಟೆ ವಿವರಿಸಿದ್ದಾರೆ.

ಸ್ವಕುಳಸಾಳಿ ಸಮಾಜದ ದಾವಣಗೆರೆ ಘಟಕದ ಅಧ್ಯಕ್ಷ ಡಾ. ಜಿ.ಪಿ. ಮೋಹನ್ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದು, ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಖಜಾಂಚಿ ಗಣೇಶ ಕ್ಷೀರಸಾಗರ ಕೋರಿದ್ದಾರೆ.

# ಅನುಭವ, ಅನುಭಾವಗಳ ಮೇಲೆ ವಚನಗಳ ರಚನೆ : ಡಾ. ರಣಧೀರ



ದಾವಣಗೆರೆ, ಜೂ. 8- ವಚನಗಳು ವೈಜ್ಞಾನಿಕ ಮತ್ತು ವೈಚಾರಿಕತೆಯ ತಳಹದಿ, ಅನುಭವ ಮತ್ತು ಅನುಭಾವಗಳ ಮೇಲೆ ರಚಿತಗೊಂಡಿವೆ. ವಿಶ್ವಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರವಾದುದು ಎಂದು ಎ.ವಿ.ಕೆ.ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ರಣಧೀರ ಹೇಳಿದರು.

ನಗರದ ಮಾಗನೂರು ಬಸಪ್ಪ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಶಿವಗೋಷ್ಠಿ ಸಮಿತಿ, ಶ್ರೀ ಶಿವಕುಮಾರಸ್ವಾಮಿ ಮಹಾಮಂಟಪ, ಸಾದರ ನೌಕರರ ಬಳಗ ಇವರ ಸಹಯೋಗದಲ್ಲಿ ಇಂದು ಏರ್ಪಾಡಾಗಿದ್ದ ಶಿವಗೋಷ್ಠಿ-306 ಹಾಗೂ ಸ್ಮರಣೆ-80 ಕಾರ್ಯಕ್ರಮದಲ್ಲಿ 'ವಚನಗಳಲ್ಲಿ ಕೃಷಿ ಮತ್ತು ಅಧ್ಯಾತ್ಮ' ವಿಷಯ ಕುರಿತು ಮಾತನಾಡಿದರು.

ಶರಣರ ವಚನಗಳಲ್ಲಿ ಶ್ರಮ ಸಂಸ್ಕೃತಿ, ಕಾಯಕ ಸಂಸ್ಕೃತಿ, ವೈಚಾರಿಕತೆ ಮತ್ತು ವೈಜ್ಞಾನಿಕತೆಯನ್ನು ಕಾಣಬಹುದು. ವಚನ ಸಾಹಿತ್ಯದಲ್ಲಿ ಜೀವನಕ್ಕೆ ಅವಶ್ಯವಾದ ಸಂಸ್ಕಾರ, ಸಂಸ್ಕೃತಿ ಅಡಗಿದೆ ಎಂದರು.

ಶರಣರ ವಚನ ಸಾಹಿತ್ಯದಲ್ಲಿ ಕೃಷಿಯ ಪೂರಕ ಸಂದೇಶಗಳನ್ನು ಹೇಳಲಾಗಿದೆ. ವಚನಗಳು ವ್ಯವಸಾಯಕ್ಕೆ ಪೂರಕವಾಗಿದ್ದವು ಎನ್ನುವುದಕ್ಕೆ ಒಕ್ಕಲಿಗ ಮುದ್ದಣ್ಣನ ವಚನಗಳು ಸಾಕ್ಷಿಯಾಗಿವೆ. ಹನ್ನೆರಡನೇ ಶತಮಾನದಲ್ಲಿ ಕೃಷಿಗೆ ಪ್ರಾಧಾನ್ಯತೆ ನೀಡಿದ್ದರು ಎಂಬ ಸಂಗತಿ ತಿಳಿದು ಬರುತ್ತದೆ ಎಂದು ಹೇಳಿದರು.

ಹಿರೇಕೋಗಲೂರಿನ ಲಿಂ. ಶರಣ ಅಂಗಡಿ ರುದ್ರಪ್ಪ ಮತ್ತು ಲಿಂ. ಶರಣೆ ರುದ್ರಮ್ಮ ಇವರ ಸ್ಮರಣೆಯನ್ನು ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆರ್. ಸಿದ್ದೇಶಪ್ಪ ಮಾಡಿದರು.

ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಂ.ಬಿ. ಸಂಗಮೇಶ್ವರಗೌಡ್ರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾಸೋಹ ದಾನಿ ಎ. ಆರ್. ವೀರಭದ್ರಪ್ಪ ಉಪಸ್ಥಿತರಿದ್ದರು.

ಕದಳಿ ಮಹಿಳಾ ವೇದಿಕೆ ಸದಸ್ಯರು ವಚನ ಗಾಯನ ನಡೆಸಿಕೊಟ್ಟರು. ಕುಸುಮ ಎನ್. ಇಂಗಳಗಿ ಸ್ವಾಗತಿಸಿದರು.

# 39ನೇ ವಾರ್ಡ್‌ನಲ್ಲಿ ಪರಿಸರ ದಿನ




ದಾವಣಗೆರೆ, ಜೂ. 8 - ನಗರ ಪಾಲಿಕೆಯ 39ನೇ ವಾರ್ಡಿನ ತರಳಬಾಳು ಬಡಾವಣೆಯ ಉದ್ಯಾನವನದಲ್ಲಿ ಶಾರದ ಮಹಿಳಾ ಮಂಡಳಿ ವತಿಯಿಂದ ಹಾಗೂ ಕಾರ್ಪೊರೇಟರ್ ಸಹಕಾರದಿಂದ ಪರಿಸರ ದಿನಾಚರಣೆಯ ಅಂಗವಾಗಿ ವಿವಿಧ ಪಾರ್ಕ್‌ಗಳಲ್ಲಿ ಸಸಿ ಹಾಕಲಾಯಿತು.

# ಶ್ರೀ ರಾಮಕೃಷ್ಣ ಶಾಲೆಯಲ್ಲಿ ಗ್ರೀನ್ ಡೇ ಆಚರಣೆ



ದಾವಣಗೆರೆ, ಜೂ. 8 - ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಗರದ ಶ್ರೀ ರಾಮಕೃಷ್ಣ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಗ್ರೀನ್ ಡೇಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕಿಯರಾದ ಶೋಭಾ, ಆಶಾ, ಕಾವ್ಯ, ಕರಿಬಸಮ್ಮ, ಭಾಗ್ಯಲಕ್ಷ್ಮಿ, ಸೌಮ್ಯ, ಮಹಾಲಕ್ಷ್ಮಿ ಮತ್ತಿತರರು ಹಾಜರಾಗಿ ವಿವಿಧ ರೀತಿಯ ಹೂವಿನ ಸಸಿಗಳನ್ನು ಶಾಲಾ ಉದ್ಯಾನವನದಲ್ಲಿ ನೆಡುವುದರೊಂದಿಗೆ ಗ್ರೀನ್ ಡೇ ನ್ನು ಆಚರಿಸಲಾಯಿತು.

## ಗುರು ಸಾಕಾರಮೂರ್ತಿ



ಸದಾ ಮುಗುಳ್ನಗೆಯ ಸಾಕಾರ ಮೂರ್ತಿ
ಪ್ರೀತಿ ವಾತ್ಸಲ್ಯದ ಕಡಲು
ಮಮತೆಯ ಮಡಿಲು
ಅತ್ಯುತ್ತಮ ಪ್ರಾಧ್ಯಾಪಕರು
ನಾಡಿನ ಹೆಸರಾಂತ
ಜಾನಪದ ವಿದ್ವಾಂಸರು
ಅವರೇ ಈಶ್ವರಪ್ಪ ಸರ್!

ಸದಾ ಮುಗುಳ್ನಗೆಯ ಹಸನ್ಮುಖಿ
ಸ್ನೇಹ ಸಂಬಂಧಗಳ ಬೆಸೆವ ಕೊಂಡಿ
ಜಾಣ್ಮೆಯೇ ಬದುಕಿನ ಮಾರ್ಗ
ಸಾಧನೆಯ ಹಾದಿಯಲಿ ಮುನ್ನಡೆಯುತಿಹರು !

ಎಲ್ಲರಿಗೂ ಅಚ್ಚುಮೆಚ್ಚಿನ ಒಡನಾಡಿಗಳು
ಸಹಪಾಠಿಗಳ ಬಾಂಧವ್ಯ ಬಂಧು
ಕುಟುಂಬ ಸದಸ್ಯರಿಗೆ ಮಾರ್ಗದರ್ಶಕರು
ಸುಸಂಸ್ಕೃತ ಚೈತನ್ಯದ ಚಿಲುಮೆ
ಅವರೇ ಈಶ್ವರಪ್ಪ ಸರ್!

ನಮ್ಮ ಜೀವನಕ್ಕೆ ಸ್ಫೂರ್ತಿಯ ಕಿರಣ
ಪ್ರೀತಿ ಪಾತ್ರಗಳ ಚೈತನ್ಯ ಕಾರಂಜಿ
ಸರಸ್ವತಿ ನೆಲೆಸಿರುವ ಮನೆ
ಮನಸ್ಸು ಬಂಗಾರದ ಮನೆ
ವಿಶಿಷ್ಟ ವ್ಯಕ್ತಿತ್ವದವರು
ಇದೋ ನಿಮಗೆ ಅರ್ಪಿತ
ಈ ನನ್ನ ಕವನ ಪುಷ್ಪ

-ಜೆಂಬಿಗಿ ಮೃತ್ಯುಂಜಯ
ಕನ್ನಡ ಉಪನ್ಯಾಸಕರು, ದಾವಣಗೆರೆ.

# ಪ್ರಭಾ ಗೆಲುವು : ತೆಂಗಿನಕಾಯಿ ಒಡೆದು ಹರಕೆ ಸಲ್ಲಿಕೆ



ದಾವಣಗೆರೆ, ಜೂ. 8 - ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಲೋಕಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಸಂತಸಕ್ಕೆ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಮುಂಭಾಗದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತೆಂಗಿನಕಾಯಿ ಒಡೆದು ಹರಕೆ ಸಮರ್ಪಿಸಿದರು.

ನಗರ ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಯುವ ಮುಖಂಡ ಪ್ರವೀಣ್ ರಾವ್ ನೇತೃತ್ವದಲ್ಲಿ ಕಾರ್ಯಕರ್ತರು ಡಾ. ಪ್ರಭಾ ಅವರಿಗೆ ಶುಭವಾಗಲಿ ಎಂದು 101 ತೆಂಗಿನಕಾಯಿ ಒಡೆದು ಹರಕೆ ತೀರಿಸಿದರು.

ಈ ವೇಳೆ ಪಾಲಿಕೆ ಕಾಂಗ್ರೆಸ್‌ನ 18ನೇ ವಾರ್ಡ್‌ನ ಅಧ್ಯಕ್ಷ ಮುಖಂಡ ಪರಮೇಶ್ ಗುಡ್ಡಳ್ಳಿ, ಮಾಜಿ ಸದಸ್ಯ ಪಿ.ಎನ್. ಚಂದ್ರಶೇಖರ್, ಜಯರಾಜ್ ಸೋಗಿ, ಸುಧಾಕರ್, ಮಂಜುನಾಥ್, ರಾಜು ಭಂಡಾರಿ, ಅರ್ಜುನ್, ಅರುಣ್ ಪೈಲ್ವಾನ್, ಶಿವಕುಮಾರ್, ಇನಾಯತ್ ಬಾಷಾ, ಕುಮಾರ್ ಕುಣೆಬೆಳಕೆರೆ, ಬಾಪೂಜಿ ಆಂಜನೇಯ, ಅವಿನಾಶ್, ದೇವರಹಟ್ಟಿ ರುದ್ರಪ್ಪ ಲಯನ್ಸ್ ಕ್ಲಬ್ ಶಿವಕುಮಾರ್ ಮತ್ತಿತರರಿದ್ದರು.

# ಮೊರಾರ್ಜಿ ಶಾಲೆ : ಕೌನ್ಸೆಲಿಂಗ್ ದಿನಾಂಕ ಮುಂದೂಡಿಕೆ

ದಾವಣಗೆರೆ, ಜೂ. 8- ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿದ್ದು, ಈ ಪರೀಕ್ಷೆಯಲ್ಲಿ ಆಯ್ಕೆಯಾದ ತಾತ್ಕಾಲಿಕ ವಿದ್ಯಾರ್ಥಿಗಳ ಪಟ್ಟಿಯನ್ನು ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ನಂ. 44, 'ಎ' ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಇಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಪಟ್ಟಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ಶಾಲಾ ಆಯ್ಕೆಗಾಗಿ ಕರೆದಿರುವ ಕೌನ್ಸೆಲಿಂಗ್ ದಿನಾಂಕಗಳನ್ನು ನಿರ್ದೇಶನಾಲಯದ ಮುಂದಿನ ಪರಿಷ್ಕೃತ ಪಟ್ಟಿಯು (ಆಯ್ಕೆ ಪಟ್ಟಿ) ಬರುವವರೆಗೂ ಮುಂದೂಡಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ : 08192-250022 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

# ನೀಟ್ ಪರೀಕ್ಷೆ ರದ್ದುಗೊಳಿಸಲು ಮಹಾರಾಷ್ಟ್ರ ಆಗ್ರಹ

## ಹಣ ಪಡೆದು ಪರೀಕ್ಷೆ ನಡೆಸಲಾಗಿದೆ : ಸಚಿವ ಮುಶ್ರಿಫ್

ಮುಂಬೈ, ಜೂ. 8 - ವೈದ್ಯಕೀಯ ಪ್ರವೇಶಕ್ಕೆ ನಡೆಸಲಾದ ನೀಟ್ ಪರೀಕ್ಷೆಯಿಂದ ಮಹಾರಾಷ್ಟ್ರದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಈ ಪರೀಕ್ಷೆ ರದ್ದುಗೊಳಿಸಬೇಕು ಎಂದು ಮಹಾರಾಷ್ಟ್ರ ಸರ್ಕಾರ ಆಗ್ರಹಿಸಿದೆ.

ನೀಟ್ ಪರೀಕ್ಷೆಯಲ್ಲಿ ದಾಖಲೆಯ 67 ಅಭ್ಯರ್ಥಿಗಳು ಮೊದಲ ಸ್ಥಾನ ಪಡೆದಿದ್ದರು. ಇವರಲ್ಲಿ ಆರು ಜನರು ಹರಿಯಾಣದ ಒಂದೇ ಕೇಂದ್ರಕ್ಕೆ ಸೇರಿದವರು. ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ. ಆದರೆ, ಯಾವುದೇ ಅವ್ಯವಹಾರ ನಡೆದಿಲ್ಲ ಎಂದು ಪರೀಕ್ಷೆ ನಡೆಸಿದ ಎನ್.ಟಿ.ಎ. ಹೇಳುತ್ತಿದೆ.

ಈ ಬಗ್ಗೆ ಮಾತನಾಡಿರುವ ಮಹಾರಾಷ್ಟ್ರದ ವೈದ್ಯಕೀಯ ಶಿಕ್ಷಣ ಸಚಿವ ಹಸನ್ ಮುಶ್ರಿಫ್, ನೀಟ್ ಪರೀಕ್ಷೆಗಳನ್ನು ಹಣ ಪಡೆದು ನಡೆಸಿರುವಂತಿದೆ. ಈ ಫಲಿತಾಂಶದಿಂದಾಗಿ ಮಹಾರಾಷ್ಟ್ರದ ಯಾವುದೇ ವಿದ್ಯಾರ್ಥಿ ರಾಜ್ಯದ ಸರ್ಕಾರಿ ಇಲ್ಲವೇ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗುವುದಿಲ್ಲ ಎಂದಿದ್ದಾರೆ.

ಈ ವಿಷಯ ಬಗೆಹರಿಸುವಂತೆ ಹಲವಾರು ವಿದ್ಯಾರ್ಥಿಗಳ ಪೋಷಕರು ಮನವಿ ಸಲ್ಲಿಸಿದ್ದಾರೆ. ಈ ಫಲಿತಾಂಶದಿಂದ ಮಹಾರಾಷ್ಟ್ರಕ್ಕೆ ಅನ್ಯಾಯವಾಗಿದೆ. ಪರೀಕ್ಷೆ ರದ್ದುಗೊಳಿಸಬೇಕು. ಈ ಬಗ್ಗೆ ನಾವು ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ ದೂರು ಸಲ್ಲಿಸಲಿದ್ದೇವೆ ಎಂದವರು ಹೇಳಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಮೊರೆ ಹೋಗಲೂ ಸರ್ಕಾರ ಪರಿಶೀಲಿಸುತ್ತಿದೆ ಎಂದವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಸಿಹಿ ವಿತರಣಾ ಕಾರ್ಯಕ್ರಮ

ನರೇಂದ್ರ ಮೋದಿಜಿ ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಆರ್.ಕೆ. ಮೆಡಿಕಲ್ಸ್ ಮತ್ತು ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಕೇಂದ್ರ ಇವರಿಂದ ಇಂದು ಬೆಳಿಗ್ಗೆ 11.30 ಕ್ಕೆ ಸಂಭ್ರ ಮಾಚರಣೆ ಹಾಗೂ ಸಿಹಿ ವಿತರಣೆ ಕಾರ್ಯಕ್ರಮ ನಡೆಯಲಿದೆ.

# ಮುಂಬೈ ಶರಣ ಸಂಕುಲ ಯಾತ್ರೆಯಲ್ಲಿ ತರಳಬಾಳು ಜಗದ್ಗುರುಗಳು



ದಾವಣಗೆರೆ, ಜೂ.8- ಶರಣ ಸಂಕುಲ ಸಂಸ್ಥೆ ವತಿಯಿಂದ ಸಂಸ್ಥೆಯ ರಜತ ಮಹೋತ್ಸವ, ಬಸವ ಜಯಂತಿ ಕಾರ್ಯಕ್ರಮವನ್ನು ನಾಳೆ 9 ರ ಭಾನುವಾರ ಮುಂಬೈ ನಗರದಲ್ಲಿ ಏರ್ಪಡಿಸಲಾಗಿದ್ದು, ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ.

25 ವರ್ಷಗಳ ಹಿಂದೆ ಜಗದ್ಗುರುಗಳವರು ಮುಂಬೈಗೆ ದಯಮಾಡಿಸಿದಾಗ ನಮ್ಮ ಮಠದ ಆಗಿನ ವಿದ್ಯಾರ್ಥಿಗಳು ಪರಮಪೂಜ್ಯರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಬಸವಾದಿ ಶಿವಶರಣರ ಜೀವನಾಧಾರಿತ 'ಶರಣ ಸಂಕುಲ' ಎಂಬ ನೃತ್ಯ ರೂಪಕವನ್ನು ಯಶಸ್ವಿಯಾಗಿ ಅಭಿನಯಿಸಿದ್ದರು. ಇದರಿಂದ ಪ್ರಭಾವಿತರಾದ ನವೀ ಮುಂಬೈನಲ್ಲಿರುವ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕದ ಬಸವ ತತ್ವಾಭಿಮಾನಿಗಳು ಶ್ರೀ ಜಗದ್ಗುರುಗಳವರ ಸಲಹೆ ಪಡೆದು 'ಶರಣ ಸಂಕುಲ' ಎಂಬ ಹೆಸರಿನಲ್ಲಿಯೇ ಈ ಸಂಸ್ಥೆಯನ್ನು ಸ್ಥಾಪಿಸಿದ್ದರು.

ಮಠದ ಈಗಿನ ಯುವ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಮತ್ತೊಮ್ಮೆ ಶರಣ ಸಂಕುಲ ನೃತ್ಯ ರೂಪಕ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿದ್ದಾರೆ. ಮಠದ ಹಿಂದಿನ ಹಿರಿಯ ಕಲಾವಿದರು ಮತ್ತು ಈಗಿನ ಒಂದು ನೂರಕ್ಕೂ ಹೆಚ್ಚು ಯುವ ಕಲಾವಿದರೊಂದಿಗೆ ಶ್ರೀ ಜಗದ್ಗುರುಗಳವರು ನಿನ್ನೆ ಸಿರಿಗೆರೆಯಿಂದ ಮುಂಬೈಗೆ ಪ್ರಯಾಣ ಬೆಳೆಸಿದರು.

ಮಹಾರಾಷ್ಟ್ರದ ಮತ್ತೊಂದು ಪ್ರಮುಖ ನಗರವಾದ ಜಲಗಾಂವ್ ನಲ್ಲಿಯೂ ಮಠದ ಯುವಕಲಾವಿದರು ಇದೇ ದಿನಾಂಕ 13ರಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲಿದ್ದಾರೆ.

# ಪಂಚಮುಖಿ ಪಾರ್ಕ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ



ದಾವಣಗೆರೆ, ಜೂ.8- ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 33ನೇ ವಾರ್ಡ್ ಸರಸ್ವತಿ ನಗರದ ಪಂಚಮುಖಿ ಉದ್ಯಾನವನದಲ್ಲಿ ಸಸಿಗಳನ್ನು ನೆಡಲಾಯಿತು.

ಈ ವೇಳೆ ಮಾತನಾಡಿದ ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಪಾರ್ಕ್‌ಗಳ ಸಂರಕ್ಷಣೆ ಕೇವಲ ಪಾಲಿಕೆ ಅಥವಾ ಅಧಿಕಾರಿಗಳದ್ದಷ್ಟೇ ಅಲ್ಲ, ಸ್ಥಳೀಯ ನಾಗರಿಕರದ್ದೂ ಹೌದು ಎಂದು ಹೇಳಿದರು.

ಪಾರ್ಕ್‌ಗಳಲ್ಲಿ ಸಸಿಗಳನ್ನು ನೆಟ್ಟು ಅಭಿವೃದ್ಧಿ ಪಡಿಸಿದರೆ ಪಾರ್ಕ್ ಒತ್ತುವರಿಯಂತಹ ಸಂದರ್ಭಗಳು ಬರುವುದಿಲ್ಲ. ಆಗ ಅದು ಸಾರ್ವಜನಿಕರ ಸ್ವತ್ತು ಆಗಿಯೇ ಉಳಿಯುತ್ತದೆ ಎಂದರು.

ಚಿಕ್ಕವನಿದ್ದಾಗಿನಿಂದಲೂ ನನಗೆ ಪರಿಸರದ ಬಗ್ಗೆ ಕಾಳಜಿ ಇತ್ತು. ಈಗಲೂ ನನ್ನ ವಾರ್ಡ್‌ನಲ್ಲಿ ಪ್ರತಿ ವರ್ಷ ಸಾಕಷ್ಟು ಸಸಿಗಳನ್ನು ನೆಟ್ಟು ಬೆಳೆಸಲಾಗುತ್ತಿದೆ. ಸಾರ್ವಜನಿಕರೂ ಸಹ ಮನೆಗಳ ಮುಂದೆ ಸಸಿ ನೆಟ್ಟು ಪರಿಸರ ಸಂರಕ್ಷಿಸಬೇಕು ಎಂದು ಕರೆ ನೀಡಿದರು.

ಉದ್ಯಾನವನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ರಾಮೋಜಿರಾವ್‌ಗೆ ಶ್ರದ್ಧಾಂಜಲಿ

ದಾವಣಗೆರೆ, ಜೂ. 8 - ಮಾರ್ಗದರ್ಶಿ ಚಿಟ್ಸ್ ಹಾಗೂ ರಾಮೋಜಿ ಫಿಲ್ಮ್ ಸಿಟಿ ಸಂಸ್ಥಾಪಕ ರಾಮೋಜಿ ರಾವ್ ಅವರು ಇಂದು ನಿಧನರಾಗಿದ್ದು, ಮೃತರ ಗೌರವಾರ್ಥ ದಾವಣಗೆರೆ ಜಿಲ್ಲಾ ಚೀಟಿ ನಿಧಿಗಳ ಸಂಘದ ವತಿಯಿಂದ ಸಂಘದ ಕಚೇರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಂ. ರಂಗರಾವ್, ಉಪಾಧ್ಯಕ್ಷ ಬಿ. ಸತ್ಯನಾರಾಯಣಮೂರ್ತಿ, ಕಾರ್ಯದರ್ಶಿ ಅಂದನೂರು ರಾಜೇಶ್ ಅವರುಗಳು ಮಾತನಾಡಿ, ಚಿಟ್ ಫಂಡ್ಸ್ ಉದ್ಯಮ, ಚಿತ್ರರಂಗ, ಪತ್ರಿಕಾ ರಂಗ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ರಾಮೋಜಿರಾವ್ ನೀಡಿರುವ ಕೊಡುಗೆಗಳನ್ನು ಮೆಲುಕು ಹಾಕಿದರು.

ಸಂಘದ ನಿರ್ದೇಶಕರುಗಳಾದ ಷಣ್ಮುಖರಾಜು ಗುಜ್ಜಾರ್, ರೆಡ್ಡಯ್ಯ (ಚಿನ್ನು), ಲೋಹಿತ್, ಎ ಪದ್ಮರಾಜ್, ಅಗಡಿ ಸತೀಶ್, ಪಿ. ರವಿ, ಮಲ್ಲಿಕಾರ್ಜುನ ಸ್ವಾಮಿ, ಎಂ.ಎ. ನವೀನ್ ಜೈನ್, ಎಂ.ಬಿ. ಸಿದ್ದಯ್ಯ, ಎಂ.ವಿ. ಶ್ರೀನಿವಾಸ ರೆಡ್ಡಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪ್ಥಿತರಿದ್ದರು.



# ಇಂದು ವಿಶ್ವ ನಾಯಕನಿಗೆ ಪಟ್ಟಾಭಿಷೇಕ

## ಬಿ.ಟಿ. ಸಿದ್ದಪ್ಪ, ಜಿ.ಎಸ್. ಶ್ಯಾಮ್ ಸಂತಸ





ದಾವಣಗೆರೆ, ಜೂ. 8 - ವಿಶ್ವ ನಾಯಕ, ದೇಶ ಭಕ್ತ, ಹಿಂದೂ ಸಾಮ್ರಾಟ, ಕನಸುಗಾರ ನರೇಂದ್ರ ಮೋದಿಜೀ 3ನೇ ಬಾರಿಗೆ ಪ್ರಧಾನಿ ಪಟ್ಟ ಅಲಂಕಾರ ಮಾಡುತ್ತಿರುವ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಹಿರಿಯ ಮುಖಂಡ ಬಿ.ಟಿ. ಸಿದ್ದಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ ದೇಶವನ್ನು ಅಭಿವೃದ್ಧಿಗೊಳಿಸುವ ಸಂಕಲ್ಪ ಹೊಂದಿದ್ದು, ವಿಕಸಿತ ಭಾರತಕ್ಕೆ ಮುನ್ನುಡಿ ಬರೆಯಲಿದ್ದಾರೆ. ಇದ್ಕಕ್ಕೆಲ್ಲ ನಾವು-ನೀವು ಸೇರಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ್ದೇವೆ.

ಆಗುತ್ತಿರುವುದು ಪ್ರಧಾನಿಯಾಗುತ್ತಿರುವ ನರೇಂದ್ರ ಮೋದಿಜಿ ಅವರಿಂದ ದೇಶದಲ್ಲಿ ಬದಲಾವಣೆಯಾಗುತ್ತಿದೆ ಎಂದಿರುವ ಅವರು, ಇಡೀ ದೇಶವೇ ಸಂಭ್ರಮ ಪಡುವ ವಿಶೇಷ ದಿನ ಇದಾಗಿದ್ದು, ದೇಶದಲ್ಲಿ ಅಭಿವೃದ್ಧಿ ಪರ್ವ ಹೊಸ ರೂಪದಲ್ಲಿ ಬರುತ್ತಿದೆ ಎಂದರು.

ಇದೇ ವೇಳೆ ಮಾತನಾಡಿದ ರಾಜ್ಯ ಬಿಜೆಪಿ ಯುವ ಘಟಕದ ಉಪಾಧ್ಯಕ್ಷ ಜಿ.ಎಸ್. ಶ್ಯಾಮ್, ಪ್ರಧಾನಿ ನರೇಂದ್ರ ಮೋದಿಜಿ ದೂರದೃಷ್ಟಿಯ ಅಭಿವೃದ್ಧಿ ಕನಸುಗಳನ್ನು ಹೊಂದಿದ್ದು, ಮತ್ತೊಮ್ಮೆ ಪ್ರಧಾನಿ ಆಗುತ್ತಿದ್ದಾರೆ. ಈ ಅಪರೂಪದ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ವಿಶ್ವವೇ ಕಾತುರದಿಂದ ಕಾಯುತ್ತಿತ್ತು ಎಂದರು.

# ನಗರದಲ್ಲಿ ಇಂದು ಸಿಂಗರ್ಸ್ ಅಂಡ್ ಡ್ಯಾನ್ಸರ್ಸ್ ಆಡಿಷನ್

ದಾವಣಗೆರೆ, ಜೂ. 8- ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ನಾಳೆ ದಿನಾಂಕ 9 ರ ಭಾನುವಾರ ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ 'ಸ್ಟಾರ್ ಆಫ್ ಕರ್ನಾಟಕ ಸಿಂಗರ್ಸ್ ಅಂಡ್ ಡ್ಯಾನ್ಸರ್ಸ್' ಆಡಿಷನ್ ನಡೆಯಲಿದೆ ಎಂದು ಪ್ರಾಣ ಕ್ರಿಯೇಷನ್ಸ್ ನ ಹರಿಪ್ರಾಣ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕನ್ನಡ ಕೋಗಿಲೆ ವಿಜೇತ ಖಾಸೀಂ, ಮಜಾ ಭಾರತದ ಜಗ್ಗಪ್ಪ, ಪ್ರತಾಪ್, ಸಂಗೀತ ಬಂದೂರು ಸೇರಿದಂತೆ, ಇತರೆ ಕಲಾವಿದರು ಭಾಗವಹಿಸಲಿದ್ದಾರೆ.

ವಿಶ್ವನಾಥ್, ಮಾರುತಿ ಪತ್ರಿಕಾಗೋಷ್ಠಿಯಲ್ಲಿದ್ದರು.

TO LET (RENT)

Brand New Commercial Complex
Location : # 644, Sri Durga Krupa,
60 feet Road, Nittuvalli,
DAVANGERE-577 004.

* Total Area - 20,000 sqft
* Basement - 3900 sqft,
* Ground Floor - 3900 sqft
* First floor - 3900 sqft
* Second floor - 3900 sqft
* Third floor - 3900 sqft

Amenity :
1) Elevator (lift) 2) Backup Power

Contact : 9036302031, 9036612091

ಭಾರತದ ನಂ.1 ಬ್ಯಾಂಕ್ ಕಡೆಯಿಂದ
ಸುವರ್ಣಾವಕಾಶ

ದಾವಣಗೆರೆ ನಗರ ಮತ್ತು ಸುತ್ತ ಮುತ್ತಲಿನ ಗ್ರಾಮದ ಸಾರ್ವಜನಿಕರಿಗೆ, ವಿಶೇಷವಾಗಿ ಎಲ್ಲಾ ಹಿರಿಯ ನಾಗರಿಕರು, ನಿವೃತ್ತ ನೌಕರರು, ವಿ.ಆರ್.ಎಸ್. ನಿವೃತ್ತ ಉಪಾಧ್ಯಾಯರು, ನಿವೃತ್ತ ಸೈನಿಕರು ಹಾಗೂ ನಿವೃತ್ತ ಬ್ಯಾಂಕ್ ನೌಕರರು, ಪಿಂಚಣಿದಾರರು, ವ್ಯಾಪಾರಸ್ಥರು, ಗೃಹಿಣಿಯರು, ಪಿಗ್ಮಿ ಏಜೆಂಟರ್, ಸಂಘದ ಮಹಿಳೆಯರು, ಗೃಹೋಪಯೋಗಿ ಉತ್ಪನ್ನಗಳ ಮಾರಾಟಗಾರರುಗಳಿಗೆ ವೃತ್ತಿ ರೂಪಿಸಿಕೊಳ್ಳಲು ಸುವರ್ಣಾವಕಾಶ, ವಯೋಮಿತಿ 30 ರಿಂದ 80 ವರ್ಷ, ವಿದ್ಯಾರ್ಹತೆ 10ನೇ ತರಗತಿ ಮತ್ತು ಮೇಲ್ಪಟ್ಟು.

ಒಂದು ಅವಕಾಶ, ಹಲವು ಪ್ರಯೋಜನಗಳು :
* ಸ್ಥಿರ ಸಂಬಳ * ಮನೆಯಿಂದ ಕೆಲಸ * ಅರೆಕಾಲಿಕ/ಪೂರ್ಣ ಸಮಯದ ಕೆಲಸ * ಶೂನ್ಯ ಹೂಡಿಕೆ * ವೇರಿಯೇಬಲ್ ಭತ್ಯೆ *ಸನ್ಮಾನ ಮತ್ತು ಪುರಸ್ಕಾರ * ಪ್ರಾವಿಡೆಂಟ್ ಫಂಡ್ * ಇಎಸ್ಐ ಸೌಲಭ್ಯ * ಗ್ರಾಚ್ಯುಟಿ *

ಭಾರತದ ಅತ್ಯಂತ ಮೌಲ್ಯಯುತ ಬಹುರಾಷ್ಟ್ರೀಯ ಕಂಪನಿ

ಅಗತ್ಯವಿರುವ ದಾಖಲೆಗಳು :
ಪಾನ್ ಕಾರ್ಡ್, ಆಧಾರ್ ಕಾರ್ಡ್, ಶಿಕ್ಷಣ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್, ಮುಖಪುಟ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ಸಣ್ಣ ಪೇಪರ್‌ನಲ್ಲಿ ಸಹಿ ಮಾದರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಫೋ. : 63606 95026 / 90352 60524

ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಮಂಗಳವಾರ, 11ನೇ ಜೂನ್ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

## ಬ್ಯಾಲದಹಳ್ಳಿ ಹಳ್ಳಕ್ಕೆ ಜೀವಕಳೆ



ಮಲೇಬೆನ್ನೂರು, ಜೂ.8- ನೀರಿಲ್ಲದೇ ಬತ್ತಿ ಬರಿದಾಗಿದ್ದ ಬ್ಯಾಲದಹಳ್ಳಿ ಹಳ್ಳಕ್ಕೆ ಮುಂಗಾರು ಪೂರ್ವ ಮಳೆ ಜೀವಕಳೆ ತಂದಿದೆ. ದೇವರಬೆಳಕೆರೆ ಪಿಕಪ್ ಡ್ಯಾಮ್ ಭರ್ತಿಯಾದ ನಂತರ ಹರಿಯುವ ಹೆಚ್ಚುವರಿ ನೀರಿನಿಂದ ಈ ಹಳ್ಳದಲ್ಲಿ ಸದಾ ನೀರು ಹರಿಯುತ್ತಿತ್ತು. ಆದರೆ, ಈ ವರ್ಷ ಬರಗಾಲ ಹೆಚ್ಚಾಗಿದ್ದರಿಂದ ಮಾರ್ಚ್ ತಿಂಗಳಲ್ಲೇ ಹಳ್ಳದಲ್ಲಿ ನೀರಿಲ್ಲದಂತಾಗಿ ದೇವರಬೆಳಕೆರೆ, ಕಡ್ಲೆಗೊಂದಿ, ಸಲಗನಹಳ್ಳಿ, ಬನ್ನಿಕೊಡು, ಬ್ಯಾಲದಹಳ್ಳಿ, ಎಕ್ಕೆಗೊಂದಿ, ಭಾನುವಳ್ಳಿ, ರಾಮತೀರ್ಥ, ನಾಗೇನಹಳ್ಳಿ, ಬೆಳ್ಳೂಡಿ, ಹನಗವಾಡಿ, ಹರಗನಹಳ್ಳಿ ಸೇರಿದಂತೆ ಹತ್ತಾರು ಹಳ್ಳಿಗಳ ತೋಟದ ಬೆಳೆಗಳಿಗೆ ತೀವ್ರ ತೊಂದರೆ ಉಂಟಾಯಿತು.

ದೇವರಬೆಳಕೆರೆ ಪಿಕಪ್ ಡ್ಯಾಮ್‌ನಿಂದ ಗೇಟ್ ಓಪನ್ ಮಾಡಿ ನೀರು ಹರಿಸುವ ಪ್ರಯತ್ನ ನೀರಿನ ಕೊರತೆಯಿಂದ ವಿಫಲವಾಗಿತ್ತು. ಇದೀಗ ಆಗಾಗ್ಗೆ ಬರುತ್ತಿರುವ ಮುಂಗಾರು ಪೂರ್ವ ಮಳೆಯಿಂದಾಗಿ ಹಳ್ಳದಲ್ಲಿ ಬಸಿ ನೀರಿಗಾಗಿ ಜೆಸಿಬಿಯಿಂದ ತೋಡಿದ್ದ ದೊಡ್ಡ ದೊಡ್ಡ ಗುಂಡಿಗಳು ತುಂಬಿಕೊಂಡು ನಿಧಾನವಾಗಿ ನೀರು ಹರಿಯುವ ಮೂಲಕ ತೋಟದ ಬೆಳೆಗಾರರಿಗೆ ಹರ್ಷ ತಂದಿದೆ.

## ಅಕ್ರಮವಾಗಿ ಗಾಂಜಾ ಗಿಡ : ಬಂಧನ

ಜಗಳೂರು, ಜೂ.8- ಮನೆಯ ಮುಂದೆ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದ ಹಿನ್ನೆಲೆಯಲ್ಲಿ ಅಸಗೋಡು ಗ್ರಾಮದ ನಾಗರಾಜ್ ಎಂಬಾತನನ್ನು ಬಿಳಿಚೋಡು ಠಾಣೆ ಪೊಲೀಸರು ಬಂಧಿಸಿದ್ದಾರೆ. ಈತನಿಂದ ಸುಮಾರು 75 ಸಾವಿರ ಮೌಲ್ಯದ 3 ಕೆಜಿ ಕ್ಕಿಂತ ಹೆಚ್ಚು ಗಾಂಜಾ ಸೊಪ್ಪನ್ನು ವಶಪಡಿಸಿಕೊಂಡಿದ್ದಾರೆ.

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ, www.hindusmatrimony.com
SGM Tours ಎಸ್‌ಜಿಎಂ ಟೂರ್ಸ್
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
ಚಾರ್‌ಧಾಮ್ ವಿಶೇಷ ಯಾತ್ರೆ SEPT OCT
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ*)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
JULY ಕಾಶಿ ಯಾತ್ರೆ
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
ದೋಧಾಮ್ ವಿಶೇಷ ಯಾತ್ರೆ OCT
ಸಂದರ್ಶಿಸುವ ಸ್ಥಳಗಳು : ಕೇದಾರ್‌ನಾಥ್, ಬದರಿನಾಥ್
AUG ರಾಮೇಶ್ವರಂ ಯಾತ್ರೆ
ಮಧುರೈ, ಕನ್ಯಾಕುಮಾರಿ, ಅನಂತಪದ್ಮನಾಭ, ರಾಮೇಶ್ವರಂ, ಶ್ರೀರಂಗಂ ಇತ್ಯಾದಿ
ಸಂಚಾಲಕರು : ವೇ|| ಲೋಕೇಶಯ್ಯ ಎಂ.
78925 10652, 94481 59303, 80509 52637
ಕೆಲವೇ ಸೀಟುಗಳು ಮಾತ್ರ ಲಭ್ಯ

## ಮೋದಿ ಪ್ರಮಾಣ : ನಸೀರ್‌ಗೆ ಆಹ್ವಾನ



ದಾವಣಗೆರೆ, ಜೂ.8- ನಾಳೆ ಭಾನುವಾರ ನಡೆಯಲಿರುವ ನರೇಂದ್ರ ಮೋದಿ ಸಂಪುಟದ ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಲು ರಾಜ್ಯ ಯೋಜನಾ ಪ್ರಾಧಿಕಾರದ ಮಾಜಿ ಸದಸ್ಯ ನಸೀರ್ ಅಹಮ್ಮದ್ ಅವರಿಗೆ ಪ್ರಧಾನ ಮಂತ್ರಿ ಕಛೇರಿ ಹಾಗೂ ಬಿಜೆಪಿ ಕಛೇರಿಯಿಂದ ಆಹ್ವಾನ ಬಂದಿದ್ದು, ಆಹ್ವಾನಕ್ಕೆ ನಸೀರ್ ಧನ್ಯವಾದ ತಿಳಿಸಿದ್ದಾರೆ.

### ಭದ್ರಾ ಜಲಾಶಯ

ನೀರಿನ ಮಟ್ಟ : 117 ಅಡಿ 3 ಇಂಚು
ಒಳ ಹರಿವು : 445 ಕ್ಯೂಸೆಕ್ಸ್
ಹೊರ ಹರಿವು : 341 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 5 ಇಂಚು













KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas